ಕರ್ನಾಟಕ ಸರ್ಕಾರ

**ಕನ್ನಡ ಅಭಿವೃದ್ಧಿ ಪ್ರಾಧಿಕಾರ**

# ನಾಡು-ನುಡಿ ಅಧ್ಯಯನ ವರದಿ

**ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಜೂನ್ ೧೦, ೨೦೦೮ರಿಂದ**
**ಮೇ ೩೧, ೨೦೧೧ರ ಅವಧಿಯಲ್ಲಿ ನಡೆಸಿದ**
**ಅಧ್ಯಯನ ಹಾಗೂ ಶಿಫಾರಸುಗಳು**

**ಮಂಡನೆ**

**ಡಾ. ಮುಖ್ಯಮಂತ್ರಿ ಚಂದ್ರು**

ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ, ಬೆಂಗಳೂರು

**ಕನ್ನಡ ಅಭಿವೃದ್ಧಿ ಪ್ರಾಧಿಕಾರ**
ಮೂರನೇ ಮಹಡಿ, ವಿಧಾನಸೌಧ
ಬೆಂಗಳೂರು - ೫೬೦ ೦೦೧

# ಕನ್ನಡ ಅಭಿವೃದ್ಧಿ ಪ್ರಾಧಿಕಾರ
## (೨೦೦೮-೨೦೧೧)


**ಅಧ್ಯಕ್ಷರು**

ಡಾ. ಮುಖ್ಯಮಂತ್ರಿ ಚಂದ್ರು

**ನಾಮನಿರ್ದೇಶಿತ ಸದಸ್ಯರು**

ಶ್ರೀ ಸಿದ್ದನಗೌಡ ಪಾಟೀಲ, ಬೆಳಗಾವಿ

ಡಾ. ನಾ.ಡಿಸೋಜ, ಸಾಗರ

ಶ್ರೀ ವಿಷ್ಣುನಾಯ್ಕ, ಅಂಕೋಲ

ಡಾ. ರಂಗಾರೆಡ್ಡಿ ಕೋಡಿರಾಂಪುರ, ಗೌರಿಬಿದನೂರು

ಶ್ರೀ ಬಿ.ಸುರೇಶ, ಬೆಂಗಳೂರು.

ಪ್ರೊ. ಎಂ. ಕೃಷ್ಣೇಗೌಡ, ಮೈಸೂರು

ಡಾ. ಮಲ್ಲಿಕಾ ಘಂಟಿ, ಬಳ್ಳಾರಿ

**ಪದನಿಮಿತ್ತ ಸದಸ್ಯರು**

ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕಾರ್ಯದರ್ಶಿಗಳು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನಿರ್ದೇಶಕರು, ಭಾಷಾಂತರ ಇಲಾಖೆ

**ಕಾರ್ಯದರ್ಶಿಗಳು**

ಶ್ರೀ ಎಸ್.ಎಂ. ಶಾಂತರಾಜು

ಡಾ. ಕೆ. ಮುರಳಿಧರ
(ದಿನಾಂಕ: ೧೬-೧೨-೨೦೧೦ ರಿಂದ ೩೧-೩-೨೦೧೧)

# ಅಧ್ಯಕ್ಷರ ಮಾತು

**ಕ**ರ್ನಾಟಕದ ಘನ ಸರ್ಕಾರವು ನನ್ನ ಮೇಲೆ ವಿಶ್ವಾಸವಿಟ್ಟು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನನ್ನಾಗಿ ನೇಮಕ ಮಾಡಿದಾಗ, ಇದೊಂದು ನಾಡು ನುಡಿಯ ಸೇವೆ ಮುಂದುವರಿಸಲು ದೊರಕಿದ ಸದವಕಾಶವೆಂದೇ ಭಾವಿಸಿ ಅಧಿಕಾರ ಸ್ವೀಕರಿಸಿದೆ. ಅದಕ್ಕೂ ಮೊದಲು, ನಾಡಿನ ಗಣ್ಯರು, ಕನ್ನಡಪರ ಹೋರಾಟಗಾರರು, ಚಿಂತಕರು ಇದೇ ಕುರ್ಚಿಯಲ್ಲಿ ಕುಳಿತು ತಮ್ಮದೇ ಆದ ಚಿಂತನೆ ಮತ್ತು ಕಾರ್ಯಶೈಲಿಯ ಮೂಲಕ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಆದರೂ 'ಕನ್ನಡ'ಕ್ಕೆ ಆಗಬೇಕಾದ ಕೆಲಸಗಳೂ ಬಹಳಷ್ಟಿವೆ.

ಈ ಕೈಂಕರ್ಯದಲ್ಲಿ ನನ್ನ ಕೈಬಲಪಡಿಸುವುದಕ್ಕಾಗಿ ಸರ್ಕಾರ ಏಳು ಜನ ನಾಮ ನಿರ್ದೇಶಿತ ಸದಸ್ಯರ ಮಂಡಳಿಯನ್ನೂ ರಚಿಸಿತು. ಅವರೆಲ್ಲರೂ ನಾಡು-ನುಡಿಯ ಅಭಿವೃದ್ಧಿ ಕುರಿತಾಗಿ ವ್ಯಕ್ತಿಗತ ನೆಲೆಯಲ್ಲಿ ಮತ್ತು ತಾವು ಪ್ರತಿನಿಧಿಸುತ್ತಿರುವ ಬೇರೆ ಬೇರೆ ಸಂಸ್ಥೆಗಳ ಮೂಲಕ ಸಾಕಷ್ಟು ಕನ್ನಡದ ಕೆಲಸಗಳನ್ನು ಮಾಡಿದವರು, ಮಾಡಬೇಕೆಂಬ ಕನಸು ಕಂಡವರು. ಸರಕಾರದ ನಿಯಮಾನುಸಾರ ಪದನಿಮಿತ್ತ ಸದಸ್ಯರಾಗಿ, ವಿವಿಧ ಸರ್ಕಾರಿ ಮತ್ತು ಅರೆಸರ್ಕಾರಿ ಇಲಾಖೆಗಳ ಮುಖ್ಯಸ್ಥರೂ ಕೂಡ ಪ್ರಾಧಿಕಾರದ ಸಭೆಗೆ ಆಗಮಿಸಿ ಸಹಾಯ-ಸಹಕಾರ ನೀಡಿದ್ದು ನನ್ನ ಬಲವನ್ನು ಇನ್ನಷ್ಟು ಹೆಚ್ಚಿಸಿತು.

ಕಳೆದ ಮೂರು ವರ್ಷಗಳಲ್ಲಿ ಕನ್ನಡ ಕಟ್ಟುವ ಕೆಲಸವನ್ನು ಎಂಟು ದಿಕ್ಕುಗಳಲ್ಲಿ ನಡೆಸಿದ್ದೇವೆ. ಆ ಎಂಟೂ ದಿಕ್ಕುಗಳನ್ನು ಪರಿವಿಡಿಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಆಡಳಿತದಲ್ಲಿ ಕನ್ನಡ ಎನ್ನುವುದಷ್ಟೇ ಅಲ್ಲದೆ ಶಿಕ್ಷಣದಲ್ಲಿ, ಕಾರ್ಮಿಕ ಲೋಕದಲ್ಲಿ, ಗಡಿನಾಡಲ್ಲಿ, ಹೊರನಾಡಲ್ಲಿ, ಒಳನಾಡಲ್ಲಿ ಎಂದು ಬಹುಮುಖಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ. ಇವೆಲ್ಲ ಕೆಲಸಗಳಿಂದ ಕನ್ನಡಕ್ಕೆ ಇರುವ ಬಹುಬಗೆಯ ಆತಂಕಗಳ ಅರಿವು ಮೂಡಿದೆ. ನಾವು ಆರಂಭಿಸಿರುವ ಕೆಲಸಗಳಿನ್ನೂ ಶೈಶವಾವಸ್ಥೆಯಲ್ಲಿವೆ. ಇದು ನಿರಂತರವಾಗಬೇಕು. ಅದರೊಡನೆ ಆತಂಕ ನಿವಾರಣೆಯ ಪ್ರಕ್ರಿಯೆಯೂ ಆರಂಭವಾಗಬೇಕಾಗಿದೆ.

ಈ ತಂಡದೊಂದಿಗೆ ಕಳೆದ ಮೂರು ವರ್ಷಗಳಲ್ಲಿ ನಾನು ನಿರ್ವಹಿಸಲು ಸಾಧ್ಯವಾದ ಕಾರ್ಯಕ್ರಮಗಳ ಪ್ರತ್ಯೇಕ ವರದಿಯೊಂದು ಸಿದ್ಧವಾಗಿದೆ. ಈ ವರದಿಯು ನಮ್ಮ

ಪ್ರಯತ್ನದ ಕಾಲಾವಧಿಯಲ್ಲಿ ಎದುರಾದ ಒಂದಷ್ಟು ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಅವನ್ನು ಪರಿಹರಿಸುವುದಕ್ಕಾಗಿ ಸರ್ಕಾರ ಇಡಬೇಕಾದ ಹೆಜ್ಜೆಗಳ ಶಿಫಾರಸುಗಳೂ ಇವೆ.

ನಾನು ಮತ್ತು ನನ್ನ ಸದಸ್ಯರು ಕನ್ನಡಪರವಾದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ, ರಾಜ್ಯದ ಎಲ್ಲ ಜಿಲ್ಲೆಗಳಿಗೆ ಮಾತ್ರವಲ್ಲ, ಹೊರರಾಜ್ಯ-ಹೊರದೇಶಗಳ ಕನ್ನಡಿಗರಿರುವ ಪ್ರದೇಶಗಳಿಗೂ ಭೇಟಿ ನೀಡಿ ಸಮಸ್ಯೆಗಳನ್ನು ಕಂಡು, ಕೇಳಿ ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ರೂಪಿಸಿದ ವರದಿ ಇದು.

ಈ ಮೊದಲೂ ಕೂಡ ನಾಡು, ನುಡಿ, ಗಡಿ ಸಮಸ್ಯೆಗಳ ಬಗ್ಗೆ ಸಾಕಷ್ಟು ಚಿಂತನೆ ನಡೆಸಿ ಸಲ್ಲಿಸಿದ ಚಂದ್ರಶೇಖರ ಪಾಟೀಲ್ ಅವರ 'ಶಿಕ್ಷಣ ವರದಿ,' ವಾಟಾಳ್ ನಾಗರಾಜ್ ಅವರ 'ಮಧ್ಯಂತರ ವರದಿ,' ಬರಗೂರು ರಾಮಚಂದ್ರಪ್ಪ ಅವರ 'ಗಡಿನಾಡು ಅಧ್ಯಯನ ವರದಿ,' ನಾಡಿನ ಸಾಹಿತಿ-ಕಲಾವಿದರೊಂದಿಗೆ ಗಡಿ ತಾಲ್ಲೂಕುಗಳ ತಿರುಗಾಟ ಮಾಡಿ ಕಲೆಹಾಕಿದ 'ಗಡಿ ಕನ್ನಡಿಗರ ಕಥೆ-ವ್ಯಥೆ' ಎಂಬ ವರದಿ ಹಾಗೂ ನಾನು ಪ್ರಾಧಿಕಾರದ ಅಧ್ಯಕ್ಷನಾದ ಹೊಸದರಲ್ಲಿ ಉತ್ತರ ಕನ್ನಡ ಜಿಲ್ಲೆಯ ಜೊಯಿಡಾದಲ್ಲಿ ನಡೆಸಿದ ರಾಜ್ಯದ ೫೨ ಗಡಿ ತಾಲ್ಲೂಕುಗಳ ಕನ್ನಡ ಕಾರ್ಯಕರ್ತರ ಸಮಾವೇಶದಲ್ಲಿ ಬಂದ ಸಲಹೆಗಳನ್ನಾಧರಿಸಿ ಸಿದ್ಧಪಡಿಸಿದ 'ಗಡಿ ಕನ್ನಡಿಗರು-ಜೊಯಿಡಾ ವರದಿ'ಗಳೆಲ್ಲವೂ ಸರ್ಕಾರದ ಮುಂದಿವೆ. ಅಲ್ಲಿ ಪ್ರಸ್ತಾಪಿಸಲಾದ ಮುಖ್ಯ ಶಿಫಾರಸುಗಳನ್ನೆಲ್ಲ ಸಮರ್ಥಿಸಿ, ಇನ್ನೂ ಕಾರ್ಯಗತವಾಗದ ಶಿಫಾರಸುಗಳನ್ನು ನೆನಪಿಸುತ್ತಲೇ ಈ ವರದಿಯನ್ನೂ ಮುಂದಿಡಲಾಗಿದೆ. ಕರ್ನಾಟಕ ಘನಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿ, ಈ ವರದಿಯಲ್ಲಿ ಪ್ರಸ್ತಾಪಿಸಲಾದ ಸಮಸ್ಯೆಗಳಿಗೆ ಕಾಲಮಿತಿ ಹಾಕಿಕೊಂಡು ಪರಿಹಾರ ಕಂಡುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಈ ವರದಿಯನ್ನು ಸಿದ್ಧಪಡಿಸುವಲ್ಲಿ ನೆರವಾದ ಪ್ರಾಧಿಕಾರದ ಎಲ್ಲ ಸದಸ್ಯರಿಗೆ, ಅಧಿಕಾರಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

**ಡಾ. ಮುಖ್ಯಮಂತ್ರಿ ಚಂದ್ರು**
ಅಧ್ಯಕ್ಷರು

# ಪ್ರಾಸ್ತಾವಿಕ ನುಡಿ

**ಕ**ನ್ನಡ ನಾಡನ್ನು ಹಲವು ಧರ್ಮಗಳಿಗೆ ಸೇರಿದ, ಬೇರೆ ಬೇರೆ ಭಾಷೆಗಳ ಒಲವುಳ್ಳ ಅರಸರು ಬೇರೆ ಬೇರೆ ಕಾಲಘಟ್ಟಗಳಲ್ಲಿ ಆಳಿಹೋಗಿದ್ದಾರೆ. ಕುತೂಹಲದ ಸಂಗತಿಯೆಂದರೆ ಈ ನಾಡನ್ನು ಅನ್ಯಭಾಷಿಕ ಅರಸರು ಆಳಿದಾಗಲೂ ಇಲ್ಲಿಯ ಆಡಳಿತ ಭಾಷೆ ಕನ್ನಡವೇ ಆಗಿತ್ತು. ಈ ಬಗ್ಗೆ ಚರಿತ್ರೆಯಲ್ಲಿ ಸಾಕಷ್ಟು ಆಧಾರಗಳು ಸಿಗುತ್ತವೆ. ಮೊಗಲರ ಆಡಳಿತ, ಮರಾಠರ ಆಡಳಿತ, ಬ್ರಿಟಿಷರ ಆಡಳಿತದ ಕಾಲಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಆ ಕಾಲದ ಆಡಳಿತ ಮಾತ್ರವಲ್ಲ, ಶಿಕ್ಷಣವೂ ಕೂಡ ಕನ್ನಡ ಭಾಷೆಯಲ್ಲಿದ್ದುದು ಸ್ಪಷ್ಟವಾಗುತ್ತದೆ. ಅದಕ್ಕೆ ಕಾರಣ ಅಂದಿನ ಆಡಳಿತದ ಸೂತ್ರ ಹಿಡಿದವರಿಗೆ ಜನಭಾಷೆ ಬಿಟ್ಟು ತಾವು ಜನರನ್ನು ತಲುಪುವುದು ಸಾಧ್ಯವಿಲ್ಲ ಎಂಬ ಅರಿವು ನಿಚ್ಚಳವಾಗಿದ್ದುದು.

ಪ್ರಪಂಚದಲ್ಲಿ ಆರು ಸಾವಿರಕ್ಕಿಂತ ಹೆಚ್ಚು ಭಾಷೆಗಳನ್ನಾಡುವ ಜನರಿದ್ದಾರೆ ಎಂಬುದು ಸಾಬೀತಾಗಿದೆ. ಕರ್ನಾಟಕವೊಂದರಲ್ಲೇ ೧೭೭ಕ್ಕಿಂತ ಹೆಚ್ಚು ಮಾತೃಭಾಷೆಗಳನ್ನಾಡುವ ಜನರಿರುವುದನ್ನು ಕಂಡುಕೊಳ್ಳಲಾಗಿದೆ. ಇಂಥ ಒಂದು ಸಂಕೀರ್ಣ ಸಂದರ್ಭದಲ್ಲಿ ಇಲ್ಲಿಯ ಬಹುಸಂಖ್ಯಾತರ ಮಾತೃಭಾಷೆಯಾದ ಕನ್ನಡವನ್ನು ರಕ್ಷಿಸುವ ಮತ್ತು ವಿಸ್ತರಿಸುವ ಗುರುತರ ಹೊಣೆಗಾರಿಕೆ ಇಂದು ಜನಸಾಮಾನ್ಯರು, ಸಾಹಿತಿ-ಕಲಾವಿದರಷ್ಟೇ ಅಲ್ಲ, ಸರಕಾರದ್ದೂ ಆಗಿದೆ. ಈ ಅಗತ್ಯವನ್ನು ಯಶಸ್ವಿಯಾಗಿ ನಿರ್ವಹಿಸುವುದಕ್ಕಾಗಿ ಈ ರಾಜ್ಯಕ್ಕೆ, ಅಂದರೆ, ಈ ರಾಜ್ಯವನ್ನು ಮುನ್ನಡೆಸುವ ಸರ್ಕಾರಕ್ಕೆ ಒಂದು ಸ್ಪಷ್ಟವಾದ 'ಭಾಷಾನೀತಿ'ಯ ಅಗತ್ಯ ಹಿಂದೆಯೂ ಇತ್ತು, ಈಗಲೂ ಇದೆ.

ಭಾಷಾವಾರು ಪ್ರಾಂತಗಳ ರಚನೆಯಾದ ಮೇಲೆ ಒಂದು ರಾಜ್ಯದ ಬಹುಸಂಖ್ಯಾತರೊಂದಿಗೆ ಅಲ್ಪಸಂಖ್ಯಾತರೂ ಕೂಡಿ ಇರಬೇಕಾದ ಅನಿವಾರ್ಯತೆ ಇದ್ದೇ ಇದೆ. ಇದು ಎಲ್ಲ ರಾಜ್ಯಗಳ ಅಲ್ಪಸಂಖ್ಯಾತರಿಗೂ ಅನ್ವಯವಾಗುವ ನೀತಿ. ಬಹುಸಂಖ್ಯಾತರನ್ನು ಪ್ರತಿನಿಧಿಸುವ ಸರ್ಕಾರಗಳಿಗೆ, ಅಲ್ಪಸಂಖ್ಯಾತರ ಹಿತಕಾಯುವ ಜವಾಬ್ದಾರಿ ಕೂಡ ಇದ್ದೇ ಇದೆ. ಅಲ್ಲಿಯ ಅಲ್ಪಸಂಖ್ಯಾತರ ಕ್ಷೇಮಚಿಂತನೆಯ ನೈತಿಕ ಹೊಣೆಗಾರಿಕೆ-ಅವರಾಡುವ ಭಾಷೆಯನ್ನು ಮುಖ್ಯವಾಗಿ ಪ್ರತಿನಿಧಿಸುವ ನೆರೆಯ ಸರ್ಕಾರದ್ದೂ ಆಗುತ್ತದೆ. ಅಂಥ ಒಂದು ನೈತಿಕ ಅನಿವಾರ್ಯತೆ ಕೂಡ ಈಗ ಕರ್ನಾಟಕ ಸರ್ಕಾರದ ಮೇಲಿದೆ.

ಭಾರತದ ಸಂವಿಧಾನವು ಒಪ್ಪಿಕೊಂಡಿರುವಂತೆ ಎಲ್ಲ ರಾಜ್ಯಭಾಷೆಗಳೂ ರಾಷ್ಟ್ರ ಭಾಷೆಗಳೇ ಆಗಿವೆ. ದೇಶದಲ್ಲಿ ಬಹುಸಂಖ್ಯೆಯ ಜನರಾಡುವ ಹಿಂದಿ ಭಾಷೆಯನ್ನು ಸಂಪರ್ಕ ಭಾಷೆಯೆಂದು ಕರೆಯಲಾಗಿದೆಯೇ ಹೊರತು ಅದೊಂದೇ ರಾಷ್ಟ್ರಭಾಷೆಯಲ್ಲ. ಈ ಹುಸಿ ನಂಬಿಕೆಯನ್ನು ಜನಮನದಿಂದ ಅಳಿಸಿಹಾಕುವ ಕರ್ತವ್ಯ ಕೂಡ ನಮ್ಮೆಲ್ಲರದಾಗಿದೆ. ಕನ್ನಡ ಒಂದು ರಾಷ್ಟ್ರಭಾಷೆ ಮಾತ್ರವಲ್ಲ, ಈ ದೇಶದ ಬೆರಳೆಣಿಕೆಯ ಅಭಿಜಾತ ಭಾಷೆಗಳಲ್ಲಿ ಒಂದು ಎಂಬುದನ್ನು ಜನಮನದಲ್ಲಿ ತುಂಬಬೇಕಾಗಿದೆ.

ತ್ರಿಭಾಷಾ ಸೂತ್ರದನ್ವಯ ರಾಜ್ಯದ ಬಹುಸಂಖ್ಯಾತರಾಡುವ ಕನ್ನಡಕ್ಕೆ ಶಿಕ್ಷಣದಲ್ಲೂ, ಆಡಳಿತದಲ್ಲೂ ಅಗ್ರಮರ್ಯಾದೆ ಸಲ್ಲಬೇಕು. ಉಳಿದಂತೆ ಇನ್ನೆರಡು ಭಾಷೆಗಳನ್ನು ಅವರ ಆಯ್ಕೆಗೆ ಬಿಡಬೇಕು ಎಂಬ ನಿಲುವು ಸರ್ಕಾರದ್ದಾಗಿದೆ. ಆದರೆ ಗ್ರಾಮಪಂಚಾಯ್ತಿಯಿಂದ ಹಿಡಿದು ವಿಧಾನಸೌಧದ ವರೆಗೆ, ಗ್ರಾಮ ಚಾವಡಿಯಿಂದ ಹಿಡಿದು ಉನ್ನತ ನ್ಯಾಯಾಲಯದ ವರೆಗೆ ಎಲ್ಲ ಹಂತಗಳಲ್ಲಿ ಕನ್ನಡವೇ ಜನಸಂಪರ್ಕ ಭಾಷೆಯಾಗಿ ನಿಲ್ಲಬೇಕು ಎಂಬ ನಿಲುವಿಗೆ ಕೂಡ ಸರ್ಕಾರ ಬದ್ಧವಾಗಬೇಕಿದೆ.

ಶಿಕ್ಷಣದಲ್ಲಿ ರಾಜ್ಯ ಭಾಷಾಮಾಧ್ಯಮ ಕುರಿತಂತೆ, ರಾಜ್ಯ ಸರ್ಕಾರಗಳ ನಿಲುವನ್ನು ಬಲಪಡಿಸುವ ಹೊಣೆಗಾರಿಕೆ ಕೇಂದ್ರದ್ದೂ ಆಗಿದೆ. ಇಡೀ ರಾಷ್ಟ್ರಕ್ಕೆ ಅನ್ವಯವಾಗುವಂಥ ಒಂದು **'ರಾಷ್ಟ್ರೀಯ ಶಿಕ್ಷಣ ನೀತಿ'**ಯನ್ನು ಕೇಂದ್ರ ಸರ್ಕಾರವು ಅಂಗೀಕರಿಸುವ ಮೂಲಕ ರಾಜ್ಯಗಳಿಗೆ ತಮ್ಮ ತಮ್ಮ ಆಡಳಿತ ಭಾಷೆಯನ್ನು ಎಲ್ಲಾ ಹಂತದಲ್ಲೂ ಕಲಿಸುವಂತಾಗಲು ಸ್ಪಷ್ಟದಾರಿ ತೋರಿಸಬೇಕಾದ ಅಗತ್ಯವಿದೆ.

ಕರ್ನಾಟಕದ ಆಡಳಿತ ಸೌಧ ಇರುವ ಬೆಂಗಳೂರು ಜಿಲ್ಲೆಯೂ ಸೇರಿದಂತೆ ಈ ರಾಜ್ಯದಲ್ಲಿ ಒಟ್ಟಿಗೆ ೧೯ ಗಡಿ ಜಿಲ್ಲೆಗಳಿವೆ, ೫೨ ಗಡಿ ತಾಲ್ಲೂಕುಗಳಿವೆ. ಈ ಗಡಿಭಾಗದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳದೆ, ಸದೃಢ ಕರ್ನಾಟಕವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಗಡಿಭಾಗಗಳಲ್ಲೂ ಕೂಡ ಪ್ರದೇಶದಿಂದ ಪ್ರದೇಶಕ್ಕೆ ಸಮಸ್ಯೆಗಳ ಸ್ವರೂಪ ಬೇರೆ ಬೇರೆ. ಈ ಬಗ್ಗೆ **ಪ್ರೊ. ಬರಗೂರು ರಾಮಚಂದ್ರಪ್ಪ** ಅವರ ಅಧ್ಯಕ್ಷತೆಯ ಸಮಿತಿ ನೀಡಿದ ವಿಸ್ತಾರವಾದ ವರದಿ ಸರ್ಕಾರದ ಮುಂದಿದೆ. **ಡಾ. ಮುಖ್ಯಮಂತ್ರಿ ಚಂದ್ರು** ಅವರ ನೇತೃತ್ವದಲ್ಲಿ ೨೦೦೬ರಲ್ಲಿ ನಡೆದ **'ಕನ್ನಡ ನುಡಿ–ಕನ್ನಡ ಗಡಿ ಜಾಗೃತಿ ಜಾಥಾ'**ದ ಅನುಭವದಿಂದ ಸಿದ್ಧಪಡಿಸಿದ **ಗಡಿ ಕನ್ನಡಿಗರ ಕಥೆ–ವ್ಯಥೆ** ಎಂಬ ವರದಿಯಲ್ಲಿ ಒಂದಷ್ಟು ಮುಖ್ಯ ಸಲಹೆಗಳಿದ್ದು, ಅದೂ ಕೂಡ ಸರ್ಕಾರದ ಮುಂದಿದೆ. ೨೦೦೯ ಜನವರಿ ೧೬ ಮತ್ತು ೧೭ರಂದು ಉತ್ತರ ಕನ್ನಡ ಜಿಲ್ಲೆಯ ಜೊಯಿಡಾದಲ್ಲಿ ನಡೆದ ರಾಜ್ಯಮಟ್ಟದ ಗಡಿ ತಾಲ್ಲೂಕುಗಳ ಕನ್ನಡ ಕಾರ್ಯಕರ್ತರ ಸಮಾವೇಶವು ಕೊಟ್ಟ ಕೆಲವು ಪ್ರಯೋಗಸಾಧ್ಯ ಸಲಹೆಗಳನ್ನು ಆಧರಿಸಿದ **'ಗಡಿ ಕನ್ನಡಿಗರು–ಜೊಯಿಡಾ ವರದಿ'** ಕೂಡ ಸರ್ಕಾರದ

ಮುಂದಿದೆ. ಈ ಎಲ್ಲ ವರದಿಗಳಲ್ಲಿ ಬಹು ಮುಖ್ಯವಾದ ಅನೇಕ ಸಲಹೆಗಳಿವೆ. ಸರ್ಕಾರವು ಇವನ್ನೆಲ್ಲ ತುರ್ತು ಅಗತ್ಯವಾಗಿ ಪರಿಗಣಿಸಬೇಕಿದೆ. ಬಹುಕಾಲದ ಗಡಿ ಸಮಸ್ಯೆಗಳ ನಿವಾರಣೆಗೆ ವಿಶೇಷ ಯೋಜನೆಯನ್ನು ಘೋಷಿಸಬೇಕಾಗಿದೆ.

ವಿವಿಧ ಕಾರಣಗಳಿಗಾಗಿ ನಾಡಿನ ಅನೇಕ ಕನ್ನಡಿಗರು ಹೊರನಾಡು–ಹೊರದೇಶ ಗಳಲ್ಲಿ ವಾಸಿಸುತ್ತ, ಅಲ್ಲಿಯ ಇನ್ನೊಂದು ಭಾಷಿಕ ಸಮುದಾಯದೊಂದಿಗೆ ಬಾಳು ನಡೆಸಬೇಕಾದಂತಹ ಅನಿವಾರ್ಯತೆ ಇರುತ್ತದೆ. ಹಾಗೆ ಇನ್ನೊಂದು ಭಾಷಿಕರೊಂದಿಗೆ ಬೆರೆತಿದ್ದೂ, ನೆಲಭಾಷೆಯನ್ನು ಮತ್ತು ಸಂಸ್ಕೃತಿಯನ್ನು ಮರೆಯದೆ ಉಳಿಸಿಕೊಂಡಿರುವ ಬೆಳವಣಿಗೆಗಳನ್ನೇ ನಾವು, –**'ಕನ್ನಡ ಜಗತ್ತು'** ಪರಿಕಲ್ಪನೆಯ ಒಳಗಡೆ–**'ಭಾಷಾದ್ವೀಪ'** ಗಳೆಂದು ಕರೆಯುತ್ತೇವೆ. ಇಂಥ ಭಾಷಾದ್ವೀಪಗಳು ನೂರಾರು ಸಂಖ್ಯೆಯಲ್ಲಿರುವುದು ನಾಡಿನ ಜನತೆಯ ಮತ್ತು ಸರ್ಕಾರದ ಜವಾಬ್ದಾರಿಯನ್ನು ಹೆಚ್ಚಿಸಿದೆ. **'ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು'** ಎಂಬ ರಾಷ್ಟ್ರಕವಿ ಕುವೆಂಪು ಅವರ ನುಡಿಗೆ ನಿಷ್ಠರಾಗಿ ಬದುಕಿದ ಬಳಗ ಅದು. ಕನ್ನಡತನವನ್ನು ಉಳಿಸಿಕೊಳ್ಳುವಲ್ಲಿ ಅವರು ತೋರಿದ ಶ್ರದ್ಧೆಯನ್ನು ಗೌರವಿಸಿ ಪ್ರೋತ್ಸಾಹಿಸುವುದಕ್ಕಾಗಿ ನಿರ್ವಹಿಸಬೇಕಾದ ಕರ್ತವ್ಯಗಳ ಪಟ್ಟಿ ಕೂಡ ಈ ವರದಿಯಲ್ಲಿದೆ.

ಕನ್ನಡಕ್ಕೆ ಅಭಿಜಾತ (ಶಾಸ್ತ್ರೀಯ) ಭಾಷೆಯ ಸ್ಥಾನಮಾನ ಅಧಿಕೃತವಾಗಿ ದೊರಕಿತು ಎಂಬ ಸಮಾಧಾನವೊಂದನ್ನು ಬಿಟ್ಟರೆ, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳು ನಾಡಿನ ಜನತೆಗೆ ಲಭ್ಯವಾಗಿಲ್ಲ. ವಿದ್ವಾಂಸರ ಸಲಹೆಯ ಮೇರೆಗೆ ಸರ್ಕಾರದ ಪರವಾಗಿ ಕ್ರಿಯಾಯೋಜನೆಯನ್ನೂ ಸಲ್ಲಿಸಲಾಗಿದೆ. ಆದರೂ ಇಷ್ಟೇಕೆ ತಡ? ಇದರ ಸೂಕ್ಷ್ಮವನ್ನು ಭೇದಿಸಬೇಕು. ಅವಶ್ಯವಿದ್ದಲ್ಲಿ ಕೇಂದ್ರದ ನಿರೀಕ್ಷೆಗೆ ತಕ್ಕಂಥ ಪೂರಕ ಕ್ರಿಯಾಯೋಜನೆಯನ್ನು ಸಲ್ಲಿಸಬಹುದಾಗಿದೆ. ಶಾಸನ ಸಾಹಿತ್ಯದಿಂದ ನಡುಗನ್ನಡದ ವರೆಗೆ ಎಲ್ಲ ಹಂತದ ಅಧ್ಯಯನ ಆಗುವಂತೆ ಸಂಶೋಧನಾ ಕಾರ್ಯದಲ್ಲಿ ಆಸಕ್ತಿ ಇರುವ ಯುವಪೀಳಿಗೆಯನ್ನು ಆ ದಿಶೆಯಲ್ಲಿ ಪಳಗಿಸುವುದು ಕೂಡ ಅಷ್ಟೇ ಮಹತ್ವದ ಕೆಲಸ. ಪಠ್ಯ–ಪುಸ್ತಕಗಳಲ್ಲಿ ಶಾಸನ ಸಾಹಿತ್ಯಕ್ಕೆ, ಹಳೆಗನ್ನಡ ಸಾಹಿತ್ಯಕ್ಕೆ, ಹೆಚ್ಚು ಹೆಚ್ಚು ಪುಟಗಳು ಮೀಸಲಿರುವಂತೆ ನೋಡಿಕೊಳ್ಳುವುದು ಅಭಿಜಾತ ಭಾಷೆಗೆ ಸಲ್ಲಲೇ ಬೇಕಾದ ಗೌರವ. ಕನ್ನಡ ಭಾಷೆಯ ಉಗಮದ ಇತಿಹಾಸವನ್ನು ಇನ್ನೂ ಆಳಕ್ಕಿಳಿದು ಅಧ್ಯಯನ ನಡೆಸಬೇಕಾದ ಒತ್ತಡ ಅಭಿಜಾತ ಭಾಷೆಯ ಕುತೂಹಲಿಗಳನ್ನು ಒತ್ತಾಯಿಸುತ್ತಿದೆ.

ಕನ್ನಡಿಗರ ನಿರುಮ್ಮಳ ಬದುಕಿಗೆ ಅಗತ್ಯ ಇರುವ ಮೂಲಭೂತ ಸೌಕರ್ಯಗಳನ್ನು ಒದಗಿಸಿದಲ್ಲಿ ಮತ್ತು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದೂ, ಗೌರವದಿಂದ ಬದುಕ ಬಹುದೆಂಬ ಭರವಸೆ ಮೂಡಿಸುವಂತಹ ಒಂದು ವಾತಾವರಣ ನಿರ್ಮಾಣವಾಗುವ

ಹಾಗೆ ಸರ್ಕಾರವು ತನ್ನ ಬದ್ಧತೆಯನ್ನು ತೋರಿದಲ್ಲಿ ಕನ್ನಡದ ಹೆಚ್ಚಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. **ಕರ್ನಾಟಕ ಸರ್ಕಾರವೆಂದರೆ ಕನ್ನಡಿಗರ ಸರ್ಕಾರ** ಎಂಬ ಭಾವನೆ ಮೂಡಬೇಕು, ಸಂವಿಧಾನಬದ್ಧವಾಗಿ ಅಲ್ಪಸಂಖ್ಯಾತರಿಗೆ ಸಲ್ಲಬೇಕಾದ ನ್ಯಾಯಕ್ಕೂ ತೊಂದರೆಯಾಗಬಾರದು ಎಂಬುದೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಒತ್ತಾಸೆಯಾಗಿದೆ. ಈ ಎಲ್ಲ ಮುಖ್ಯ ಆಶಯಗಳ ಅಡಿಯಲ್ಲಿ ಸಿದ್ಧಪಡಿಸಿದ ಈ ವರದಿಯನ್ನು ಗಂಭೀರವಾಗಿ ಪರಿಶೀಲಿಸಿ, ಮುಂದಿಟ್ಟ ಸಲಹೆಗಳೆಲ್ಲ ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕೆಂಬುದು ನಮ್ಮ ಮನವಿ ಮತ್ತು ಆಗ್ರಹ.

ಇದನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಎಲ್ಲರಿಗೂ ಪ್ರಾಧಿಕಾರದ ಕೃತಜ್ಞತೆಗಳು.

**ಸಮನ್ವಯ**

| | |
|---|---|
| **ವಿಷ್ಣುನಾಯ್ಕ** | **ಡಾ. ನಾ.ಡಿಸೋಜ** |
| **ಬಿ. ಸುರೇಶ** | **ಪ್ರೊ. ಎಂ.ಕೃಷ್ಣೇಗೌಡ** |
| **ಸಿದ್ದನಗೌಡ ಪಾಟೀಲ** | **ಡಾ. ರಂಗಾರೆಡ್ಡಿ ಕೋಡಿರಾಂಪುರ** |

**ಡಾ. ಮಲ್ಲಿಕಾ ಘಂಟಿ**

# ಪರಿವಿಡಿ

**೧. ಆಡಳಿತ ಕನ್ನಡ**

೧.೧ ಕನ್ನಡ ಭಾಷೆಯಲ್ಲಿ ನುರಿತ ಅಧಿಕಾರಿಗಳನ್ನೇ ಜಿಲ್ಲಾ ಕೇಂದ್ರಗಳಲ್ಲಿ ನಿಯೋಜಿಸುವುದು ೧೧

೧.೨ ಕನ್ನಡ ಪತ್ರಿಕೆಗಳಲ್ಲಿ ಆಂಗ್ಲ ಜಾಹೀರಾತನ್ನು ಕಡ್ಡಾಯವಾಗಿ ನಿಷೇಧಿಸುವ ಕುರಿತು ೧೨

೧.೩ ಪ್ರಾಚೀನ ತಾಳೆ ಓಲೆ ಹಸ್ತಪ್ರತಿಗಳನ್ನು ಸರ್ಕಾರದ ಸ್ವತ್ತೆಂದು ಘೋಷಿಸುವುದು ೧೪

೧.೪ ನವೆಂಬರ್ ೧ರಂದು ಕನ್ನಡ ಧ್ವಜ ಹಾರಿಸುವಂತೆ ಶಾಸನಬದ್ಧ ಸುತ್ತೋಲೆ ಕಳಿಸುವುದು ೧೫

೧.೫ ಕಾಲಮಿತಿಯಲ್ಲಿ ನಾಡಗೀತೆ ಹಾಡುವಂತೆ ಕಾನೂನು ರಚಿಸುವುದು ೧೬

**೨. ಉದ್ಯೋಗದಲ್ಲಿ ಕನ್ನಡ**

೨.೧ ಉದ್ಯೋಗ ಭರವಸೆ ೧೮

೨.೨ ಪರಭಾಷಾ ಕಾರ್ಮಿಕರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕನ್ನಡ ಕಲಿಕಾ ಕೇಂದ್ರ ೧೯

೨.೩ ಸರೋಜಿನಿ ಮಹಿಷಿ ವರದಿಯ ಪರಿಷ್ಕರಣೆ ೨೧

**೩. ವಿದ್ಯಾರ್ಥಿ ಕನ್ನಡ**

೩.೧ ಕನ್ನಡ ಮಾಧ್ಯಮದಲ್ಲಿ ಓದಿದ ಹೊರನಾಡ ವಿದ್ಯಾರ್ಥಿಗಳಿಗೆ ಬೆಂಬಲ ೨೨

೩.೨ ಹೊರನಾಡ ಸ್ನಾತಕೋತ್ತರ ಕೇಂದ್ರಗಳಲ್ಲಿ ಓದುವವರಿಗೆ ವಿಶೇಷ ನೆರವು ೨೪

೩.೩ ಶಾಲಾ ಸಿಬ್ಬಂದಿಗಳಿಗೆ ವಸತಿ ನಿಲಯ : ಗಡಿಹಳ್ಳಿಗಳಿಗೆ ಮೊದಲ ಆದ್ಯತೆ ೨೬

೩.೪ ಕನ್ನಡ ಮಾಧ್ಯಮ ಪ್ರಶಸ್ತಿ ೨೭

೩.೫ ಕಾಲೇಜು ವಿದ್ಯಾರ್ಥಿಗಳಿಗೆ ಕನ್ನಡ ಜಾಗೃತಿ ೨೯

೩.೬ ವೃತ್ತಿ ಶಿಕ್ಷಣ ಹಾಗೂ ಪದವಿ ಶಿಕ್ಷಣದಲ್ಲಿ ಕನ್ನಡ ಪಠ್ಯವನ್ನು ಕಡ್ಡಾಯಗೊಳಿಸುವ ಬಗ್ಗೆ ೩೦

೩.೭ ಐಚ್ಛಿಕ ವಿಷಯವಾಗಿ ಕನ್ನಡ ಕಡ್ಡಾಯಗೊಳಿಸುವುದು. ೩೧

**೪. ನ್ಯಾಯಾಂಗ ಕನ್ನಡ**

೪.೧ ನ್ಯಾಯಾಂಗದಲ್ಲಿ ಕನ್ನಡ ೩೨

**೫. ಗಣಕ ಕನ್ನಡ**

೫.೧ ಗಣಕದಲ್ಲಿ ಕನ್ನಡದ ಏಕೀಕರಣ ೩೩

೫.೨ ಸಂಚಾರಿ ದೂರವಾಣಿಯಲ್ಲಿ ಕನ್ನಡ ೩೬

**೬. ಒಳನಾಡ ಕನ್ನಡ**

೬.೧ ಕನ್ನಡ ಭವನಗಳ ನಿರ್ಮಾಣ ೩೭

೬.೨ ಕನ್ನಡೇತರರಿಗೆ ಕನ್ನಡ ಕಲಿಕಾ ಕೇಂದ್ರಗಳನ್ನು ಆರಂಭಿಸುವ ಬಗ್ಗೆ ೩೯

೬.೩ ಕನ್ನಡ ಸಿನಿಮಾಗಳಿಗೆ ನೀಡುತ್ತಿರುವ ಸೌಲಭ್ಯಗಳು : ನೀಡುವಾಗ ಗಮನಿಸಬೇಕಾದ ಅಂಶಗಳು ೪೧

**೭. ಗಡಿ ಕನ್ನಡ**

೭.೧ ನೆರೆರಾಜ್ಯಗಳ ಗಡಿಭಾಗಗಳಲ್ಲಿ ಇರುವ ಕನ್ನಡ ಸಂಘ–ಸಂಸ್ಥೆಗಳಿಗೆ ಆಯವ್ಯಯದಲ್ಲಿ ಹಣ ಮೀಸಲು ೪೩

೭.೨ ಗಡಿ ತಾಲ್ಲೂಕುಗಳ ಅಭಿವೃದ್ಧಿಗೆ ವಿಶೇಷ ಯೋಜನೆ ೪೪

೭.೩ ಸಾಂಸ್ಕೃತಿಕ ಕರ್ನಾಟಕದ ಪರಿಕಲ್ಪನೆಗೆ ಒತ್ತು ೪೬

**೮. ಹೊರನಾಡ ಕನ್ನಡ**

೮.೧ ಹೊರನಾಡು–ದೇಶಗಳಲ್ಲಿರುವ ಕನ್ನಡಿಗರಿಗೆ ಕನ್ನಡ ಕಲಿಕಾ ಕೇಂದ್ರ ಹಾಗೂ ಅಲ್ಲಿಯ ಕನ್ನಡ ಸಂಘಟನೆಗಳ ಕಾರ್ಯಕ್ರಮಗಳಿಗೆ ಅನುದಾನ ೪೮

**೯. ಶಾಸ್ತ್ರೀಯ ಕನ್ನಡ**

೯.೧ ಆದಿಕವಿ ಪಂಪನ ಹೆಸರಿನಲ್ಲಿ ಪ್ರಾಚೀನ ಕನ್ನಡ ಸಂಶೋಧನಾ ಕೇಂದ್ರ ೫೧

೯.೨ ದೆಹಲಿಗೆ ಜಂಟಿ ನಿಯೋಗ ೫೩

**೧೦. ಸಮಾರೋಪ** ೫೫

# ೧.೧
# ಕನ್ನಡ ಭಾಷೆಯಲ್ಲಿ ನುರಿತ ಅಧಿಕಾರಿಗಳನ್ನೇ ಜಿಲ್ಲಾ ಕೇಂದ್ರಗಳಲ್ಲಿ ನಿಯೋಜಿಸುವುದು

**ರಾ**ಜ್ಯದ ೩೦ ಜಿಲ್ಲೆಗಳಲ್ಲಿ ೧೯ ಗಡಿ ಜಿಲ್ಲೆಗಳೆಂಬುದು ಸರ್ಕಾರಕ್ಕೆ ತಿಳಿದೇ ಇದೆ. ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರದ ಮುಖ್ಯ ಅಧಿಕಾರಿಗಳ ಮನೋಧರ್ಮದ ಮೇಲೆಯೇ ತಾಲ್ಲೂಕು ಹಂತದ ಆಡಳಿತ ನಡೆಯುತ್ತಿದೆ. ಕನ್ನಡ ನಾಡು-ನುಡಿ, ನೆಲ-ಜಲಗಳ ಬಗ್ಗೆ ನಿರ್ವಿವಾದ ಶ್ರದ್ಧೆಯುಳ್ಳಂತಹ ಐ.ಎ.ಎಸ್, ಐ.ಪಿ.ಎಸ್, ಐ.ಎಫ್.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ವಿಶೇಷವಾಗಿ ಜಿಲ್ಲಾ ಕೇಂದ್ರಗಳಲ್ಲಿ ಇಂಥವರನ್ನೇ ಹುಡುಕಿ ಸರ್ಕಾರವು ನಿಯೋಜಿಸಿದಲ್ಲಿ ತನ್ನಿಂದ ತಾನೇ ಎಲ್ಲ ಜಿಲ್ಲೆಗಳಲ್ಲಿ ಕನ್ನಡದ ವಾತಾವರಣ ಬಲಗೊಳ್ಳುತ್ತದೆ. ರಾಜ್ಯದ ಎಲ್ಲ ಹಂತದ ಆಡಳಿತ ಕನ್ನಡದಲ್ಲೇ ಇರಬೇಕು ಮತ್ತು ಎಲ್ಲ ಕಡತಗಳ ಮೇಲೆ ಕನ್ನಡದಲ್ಲೇ ಟಿಪ್ಪಣಿ ಬರೆಯಬೇಕು, ಮಾತ್ರವಲ್ಲ ಕನ್ನಡ ಬಳಕೆ ಮಾಡದೆ ಇರುವ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು - ಎಂಬ ಸರ್ಕಾರೀ ಆದೇಶಗಳು ಜಾರಿಯಲ್ಲಿರುವಾಗಲೂ, ಆಗೊಮ್ಮೆ ಈಗೊಮ್ಮೆ ಪ್ರಮಾದಗಳು ಕಣ್ಣಿಗೆ ಬೀಳುತ್ತಲೇ ಇವೆ. ಅರೆಬರೆ ಮನಸ್ಸಿನಿಂದ ಕನ್ನಡ ಬಳಸುವ ಅಧಿಕಾರಗಳ ಬಗ್ಗೆ ರಹಸ್ಯ ಮಾಹಿತಿ ಪಡೆದುಕೊಳ್ಳಬೇಕು ಮತ್ತು ಅಂತಹ ಯಾವುದೇ ಅಧಿಕಾರಿಯು ಜಿಲ್ಲಾ ಕೇಂದ್ರದಲ್ಲಿ ಇರದಂತೆ ಸರ್ಕಾರ ಕಟ್ಟೆಚ್ಚರ ವಹಿಸಬೇಕಾಗಿದೆ.

### ಶಿಫಾರಸುಗಳು

**ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು (ಎಸ್.ಪಿ) ಉಪ ವಿಭಾಗಾಧಿಕಾರಿಗಳು ಹಾಗೂ ಬೇರೆ ಬೇರೆ ಇಲಾಖೆಗಳ ಮುಖ್ಯಸ್ಥರು ಚೆನ್ನಾಗಿ ಕನ್ನಡ ಮಾತಾಡಲು, ಬರೆಯಲು ಮತ್ತು ಓದಲು ಬಲ್ಲವರೇ ಎಂಬುದನ್ನು ದೃಢಪಡಿಸಿಕೊಳ್ಳುವ ನಿಯಮವನ್ನು ಸರ್ಕಾರದ ವರ್ಗಾವಣೆ ನೀತಿಯಲ್ಲಿ ಕಡ್ಡಾಯವಾಗಿ ಸೇರಿಸುವುದು.**

## ೧.೨
## ಕನ್ನಡ ಪತ್ರಿಕೆಗಳಲ್ಲಿ ಆಂಗ್ಲ ಜಾಹೀರಾತನ್ನು ಕಡ್ಡಾಯವಾಗಿ ನಿಷೇಧಿಸುವ ಕುರಿತು

**ಕ**ರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಡಿಪಿಎಆರ್/ಪಿಒಎಲ್/೮೩, ದಿನಾಂಕ: ೧೦-೦೨-೧೯೮೩ರನ್ವಯ ಕನ್ನಡವನ್ನು ಆಡಳಿತ ಭಾಷೆಯಾಗಿ ಪರಿಣಾಮಕಾರಿಯಾಗಿ ಜಾರಿಗೆ ತರುವ ಉದ್ದೇಶದಿಂದ ಪ್ರಕಟಣೆಗಳು, ನಮೂನೆಗಳು, ಜಾಹೀರಾತುಗಳು, ಸೂಚನೆಗಳು, ಪರವಾನಗಿಗಳು, ರಶೀದಿಗಳು, ಪ್ರಮಾಣಪತ್ರಗಳು, ಬೀದಿ ಫಲಕಗಳು ಕನ್ನಡದಲ್ಲೇ ಇರಬೇಕೆಂದು ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಈ ವಿಚಾರದಲ್ಲಿ ಲೋಪವಾದರೆ ಆಯಾ ಕಚೇರಿಗಳ ಹಿರಿಯ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದೆಂದೂ ಸ್ಪಷ್ಟಪಡಿಸಲಾಗಿದೆ. ಅನಂತರವೂ ಕನ್ನಡ ದಿನಪತ್ರಿಕೆಗಳಲ್ಲಿ ಆಂಗ್ಲ ಜಾಹೀರಾತುಗಳು/ಪ್ರಕಟಣೆಗಳು ಮುದ್ರಣಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಸರ್ಕಾರದ ಪುನರ್‌ಆದೇಶ ಸಂಖ್ಯೆ:ಇ/೪೧/ಕೆಬಿಎಚ್-೯೮/ದಿನಾಂಕ: ೧೯-೧೧-೧೯೯೮ರನ್ವಯ ಮೇಲಿನ ನಿಯಮ ಉಲ್ಲಂಘಿಸಿದ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂಬುದಾಗಿ ಸರ್ಕಾರ ಎಚ್ಚರಿಸಿದೆ.

ಇಷ್ಟರ ಮೇಲೂ ಕನ್ನಡ ದಿನಪತ್ರಿಕೆಗಳಲ್ಲಿ ಆಂಗ್ಲ ಜಾಹೀರಾತುಗಳು, ಪ್ರಕಟಣೆಗಳು, ಪ್ರಕಟವಾಗುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿದೆ. ಮೇಲೆ ಉಲ್ಲೇಖಿಸಿದ ಸರ್ಕಾರದ ಆದೇಶಗಳು ಜಾಹೀರಾತು ಪಡೆಯುವವರ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಸಂಬಂಧಪಟ್ಟವರು ಅದನ್ನು ಗಮನಿಸಿಯೇ ಇಲ್ಲ ಅಥವಾ ಅದನ್ನು ಉಪೇಕ್ಷಿಸಿದ್ದಾರೆ ಎಂಬುದೂ ಸ್ಪಷ್ಟವಾಗುತ್ತದೆ. ಈ ಉಲ್ಲಂಘನೆಯ ಉದ್ಧಟತನದ ಬಗ್ಗೆ ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಕಾರದ ಆದೇಶವೇ ಅಪಹಾಸ್ಯಕ್ಕೆ ಈಡಾದ ಹಾಗೆ ಆಗುತ್ತದೆ.

### ಶಿಫಾರಸು

ಕನ್ನಡದ ದಿನಪತ್ರಿಕೆಗಳಲ್ಲಿ ಯಾವುದೇ ಜಾಹೀರಾತಾಗಲಿ, ಸಾರ್ವಜನಿಕ ಸೂಚನೆಗಳಾಗಲಿ, ರಶೀದಿಗಳಾಗಲಿ, ಇತರೇ ಪ್ರಕಟಣೆಗಳಾಗಲಿ ಆಂಗ್ಲ ಭಾಷೆಯಲ್ಲಿ ಪ್ರಕಟವಾದರೆ, ಅದನ್ನು ಸರ್ಕಾರದ ಕಾನೂನಿನ ನೇರ ಉಲ್ಲಂಘನೆ ಎಂದು ಪರಿಗಣಿಸಿ, ಅಂತಹ ಪ್ರಕಟಣೆಗೆ ಕಾರಣರಾದ ಅಧಿಕಾರಿಗಳು / ವ್ಯಕ್ತಿಗಳು ಕಠಿಣ ಶಿಕ್ಷೆಗೆ ಒಳಗಾಗುವಂತಹ ನಿಯಮವು ತುರ್ತಾಗಿ ಜಾರಿಗೆ ತರಬೇಕು ಮತ್ತು ಈ ಬಗ್ಗೆ ನಿಯಮಿತವಾಗಿ ವರದಿ ಪಡೆಯುವ ವ್ಯವಸ್ಥೆಯೂ ಇರಬೇಕು.

❍

# ೧.೩
# ಪ್ರಾಚೀನ ತಾಳೆ ಓಲೆ ಹಸ್ತಪ್ರತಿಗಳನ್ನು ಸರ್ಕಾರದ ಸ್ವತ್ತೆಂದು ಘೋಷಿಸುವುದು

**ಕ**ನ್ನಡಕ್ಕೆ ಅಭಿಜಾತ (ಶಾಸ್ತ್ರೀಯ) ಭಾಷಾ ಸ್ಥಾನಮಾನ ದೊರಕಿದ ಹಿನ್ನೆಲೆಯಲ್ಲಿ ಹೆಚ್ಚಿನ ಸಂಶೋಧನೆಗೆ ಅನುಕೂಲವಾಗುವಂತೆ ಇದುವರೆಗೆ ರಾಜ್ಯದ ಬೇರೆ ಬೇರೆ ಸಂಸ್ಥೆಗಳಲ್ಲಿ/ವ್ಯಕ್ತಿಗಳಲ್ಲಿ ಲಭ್ಯ ಇರುವ ಹಸ್ತಪ್ರತಿಗಳ ಹಕ್ಕು ಯಾರಿಗೆ ಸೇರಿದ್ದೆಂಬ ಬಗ್ಗೆ ನಿರ್ದಿಷ್ಟವಾದ ನಿಯಮ ಇದ್ದಂತಿಲ್ಲ. ವಿವಿಧ ವಿಶ್ವವಿದ್ಯಾಲಯಗಳಲ್ಲಿ, ಜ್ಞಾನ ಜಿಜ್ಞಾಸುಗಳ ಮನೆಯಲ್ಲಿ, ಗ್ರಾಮೀಣ ಭಾಗದ ಮಾಡುಗಳಲ್ಲಿ (ಅಟ್ಟದ ಮೇಲಿನ ಕಂಬಗಳಿಗೆ/ಜಂತಿಗಳಿಗೆ ತೂಗಿ ಹಾಕಲ್ಪಟ್ಟವು) – ಹೀಗೆ ಬೇರೆ ಬೇರೆ ಸಂಸ್ಥೆಗಳು/ವ್ಯಕ್ತಿಗಳು ಸಂಗ್ರಹಿಸಿರುವ –ಮೋಡಿ ಅಕ್ಷರಗಳಲ್ಲಿರುವ ತಾಳೆ ಓಲೆಗಳನ್ನು (ತಾಳೆಗರಿ) ಸರ್ಕಾರವು ಕಲೆಹಾಕಿ, ಅಮೂಲ್ಯವಾದ ಆ ಸಂಪತ್ತನ್ನು ರಕ್ಷಿಸುವ ಉದ್ದೇಶದಿಂದ ಅವೆಲ್ಲವೂ **ಸರ್ಕಾರದ ಸ್ವತ್ತು** ಎಂಬುದಾಗಿ ಘೋಷಿಸಬೇಕು. ವ್ಯಕ್ತಿಗಳ ನೆಲೆಯಲ್ಲಿ ಸಂಗ್ರಹಿಸಿಟ್ಟುಕೊಂಡ 'ತಾಳೆ ಓಲೆ' ಪ್ರತಿಗಳನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವಾಗ, ಅವರಿಗೆ ಸೂಕ್ತ ಗೌರವ ಸಂಭಾವನೆ ನೀಡುವ ವ್ಯವಸ್ಥೆ ಮಾಡಬೇಕು ಮತ್ತು ಅವನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ಮೂಲ ಸಂಗ್ರಾಹಕರ ಹೆಸರನ್ನು ಉಲ್ಲೇಖಿಸುವುದಾಗಿ ಭರವಸೆ ನೀಡಬೇಕು. ಹೀಗೆ ಮಾಡುವುದರಿಂದ ಮೂಲ ಸಂಗ್ರಾಹಕರಿಗೂ ಸಾರ್ಥಕತೆಯ ಭಾವನೆ ಮೂಡುತ್ತದೆ. ಈ 'ತಾಳೆ ಓಲೆ' ಪ್ರತಿಗಳ ಅಧ್ಯಯನವನ್ನು ಸಂಶೋಧನ ಕೇಂದ್ರಗಳಿಗೆ ವಹಿಸಿಕೊಟ್ಟು ಪ್ರಾಚೀನ ಕನ್ನಡದ ಇತಿಹಾಸ ಮತ್ತು ಬೆಳವಣಿಗೆಗಳ ಮೇಲೆ ವಿಶೇಷ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ.

### ಶಿಫಾರಸು

**ನಾಡಿನ ಒಳಗೂ ಹೊರಗೂ ಶಾಸನಗಳ, ಪ್ರಾಚೀನ ಕಾವ್ಯಗಳ, ದಾಖಲಾತಿಗಳು (ತಾಳೆ ಓಲೆಗಳು) ಹರಡಿ ಹೋಗಿವೆ. ಅವನ್ನೆಲ್ಲ ವ್ಯವಸ್ಥಿತವಾಗಿ ಸಂಗ್ರಹಿಸಿ, ಮೂಲ ಸಂಗ್ರಹಕಾರರಿಗೆ ಗೌರವ ಸಂಭಾವನೆ ನೀಡುವುದು ಮತ್ತು ಈ ಎಲ್ಲ ದಾಖಲೆಗಳು ಸರ್ಕಾರದ ಸ್ವತ್ತು ಎಂದು ಘೋಷಿಸಲು ಕ್ರಮ ಕೈಗೊಳ್ಳುವುದು.** ❍

## ೧.೪
# ನವೆಂಬರ್ ೧ರಂದು ಕನ್ನಡ ಧ್ವಜ ಹಾರಿಸುವಂತೆ ಶಾಸನಬದ್ಧ ಸುತ್ತೋಲೆ ಕಳಿಸುವುದು

**ಕ**ರ್ನಾಟಕ ರಾಜ್ಯವು ಭಾರತದ ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಿಕೊಂಡೇ ಬಂದಿದೆ. ಮುಂದೆಯೂ ಆ ನಿಲುವಿನಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. 'ಭಾರತ ಮಾತೆಯ ತನುಜಾತೆ, ಜಯಹೇ ಕರ್ನಾಟಕ ಮಾತೆ' ಎಂಬ ಪರಿಕಲ್ಪನೆಯ ಅಡಿಯಲ್ಲಿ ಕರ್ನಾಟಕದ ಜನತೆ ತಮ್ಮ ಮನಸ್ಸಿನಲ್ಲಿ ಈ ನಾಡು-ನುಡಿ, ನೆಲ-ಜಲಗಳ ಬಗ್ಗೆ ತಮ್ಮದೇ ಆದ ಚಿತ್ರವನ್ನು ಮೂಡಿಸಿಕೊಂಡಿದ್ದಾರೆ. ರಾಷ್ಟ್ರಧ್ವಜಕ್ಕೆ ಸಲ್ಲುವಂತೆ, ಕನ್ನಡ ಧ್ವಜಕ್ಕೂ ಗೌರವ ಸಲ್ಲಬೇಕು ಎಂಬ ಹಿನ್ನೆಲೆಯಲ್ಲಿ ಸರ್ಕಾರೀ ಕಛೇರಿಗಳು, ಸಂಘ-ಸಂಸ್ಥೆಗಳು ರಾಷ್ಟ್ರಧ್ವಜವನ್ನು ದೇಶಾಭಿಮಾನದ ಸಂಕೇತವಾಗಿ ಹಾರಿಸುವಂತೆ, ನವೆಂಬರ ಒಂದರಂದು ನಾಡಾಭಿಮಾನದ ಸಂಕೇತವಾಗಿ ಕನ್ನಡ ಧ್ವಜವನ್ನು ಹಾರಿಸುವುದಕ್ಕೆ ಸರ್ಕಾರವು ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಶಾಸನಬದ್ಧ ಕಾನೂನನ್ನು ರಚಿಸಿ, ರಾಜ್ಯದ ಎಲ್ಲ ಇಲಾಖೆಗಳಿಗೆ ಸುತ್ತೋಲೆ ಕಳಿಸಬೇಕೆಂಬುದು ಜನತೆಯ ಬಹುಕಾಲದ ನಿರೀಕ್ಷೆಯಾಗಿದೆ. ಈಗಿರುವ ಕನ್ನಡ ಧ್ವಜದ ಬಣ್ಣವನ್ನು ಹಾಗೇ ಇಟ್ಟು, ಅದರ ಮೇಲೆ ಕರ್ನಾಟಕದ ಚಾರಿತ್ರಿಕ ಹಿನ್ನೆಲೆಯನ್ನು ಬಿಂಬಿಸುವಂಥ ಪ್ರತಿಮೆಯನ್ನು (ಲಾಂಛನ) ಸೇರಿಸಬಹುದಾಗಿದೆ. ಈ ಕುರಿತು ನಾಡಿನ ತಜ್ಞರೊಂದಿಗೆ ಸಮಾಲೋಚನೆಯ ಅಗತ್ಯವಿದ್ದಲ್ಲಿ ಪಡೆಯಬಹುದಾಗಿದೆ.

### ಶಿಫಾರಸು

**ಕರ್ನಾಟಕ ರಾಜ್ಯೋತ್ಸವದ ದಿನವಾದ ನವೆಂಬರ ಒಂದರಂದು ಕನ್ನಡ ಧ್ವಜವನ್ನು ಸರ್ಕಾರೀ, ಅರೆಸರ್ಕಾರೀ ಮತ್ತು ಖಾಸಗೀ ಸಂಸ್ಥೆಗಳಲ್ಲಿ ಹಾರಿಸುವಂತೆ ಕಾನೂನುಬದ್ಧ ನಿಯಮ ತಂದು, ಸುತ್ತೋಲೆ ಹೊರಡಿಸಬೇಕು..**

೦

## ೧.೫
# ಕಾಲಮಿತಿಯಲ್ಲಿ ನಾಡಗೀತೆ ಹಾಡುವಂತೆ ಕಾನೂನು ರಚಿಸುವುದು

**"ನಾ**ಡಗೀತೆಯನ್ನು ಸಂಕ್ಷಿಪ್ತಗೊಳಿಸಬೇಕು" ಎಂಬ ಬೇಡಿಕೆ ಇಂದು-ನಿನ್ನೆಯದಲ್ಲ. ಈಗಿರುವ ನಾಡಗೀತೆಯ ಬದಲಿಗೆ ಬೇರೊಂದು ಗೀತೆಯನ್ನು ಆಯ್ಕೆಮಾಡಿಕೊಳ್ಳ ಬೇಕೆಂದು ಯಾರೂ ಹೇಳುತ್ತಿಲ್ಲ. ಆ ಬಗ್ಗೆ ವಿವಾದವೇ ಇಲ್ಲ. ವಿವಾದ (ಚರ್ಚೆ) ಇರುವುದು, ಅದು ಎಷ್ಟು ಕಾಲಾವಧಿಯದಾಗಿರಬೇಕೆಂಬುದರ ಬಗ್ಗೆ. ಅದನ್ನು ಹಾಡುವ ಪದ್ಧತಿ ಇಡೀ ನಾಡಿನಲ್ಲಿ ಒಂದೇ ತೆರನಾಗಿಲ್ಲವೆಂಬ ಬಗ್ಗೆ ಕೂಡ ಆತಂಕದ ಮಾತುಗಳಿವೆ.

ಈಗಾಗಲೇ ನಾಡಗೀತೆಯನ್ನು ಸಂಕ್ಷಿಪ್ತಗೊಳಿಸಿ ಸರ್ಕಾರಕ್ಕೆ ವರದಿ ನೀಡುವುದಕ್ಕಾಗಿ ತಜ್ಞರ ಸಮಿತಿ ರಚಿಸಲಾಗಿತ್ತು. ಅದು ನೀಡಿದ ವರದಿ ಕೂಡ ಸರ್ಕಾರದ ಮುಂದಿದೆ. ಅದರ ವರದಿ ಬಹಿರಂಗವಾಗುತ್ತಿದ್ದಂತೆ ವಾದ-ವಿವಾದಗಳೂ ಹುಟ್ಟಿಕೊಂಡವು. ಬಹುಶಃ ಈ ಹಿನ್ನೆಲೆಯಲ್ಲಿ ಸರ್ಕಾರ ನಾಡಗೀತೆ ಹಾಡುವ ಕಾಲಾವಧಿಯನ್ನು ಸಂಕ್ಷಿಪ್ತಗೊಳಿಸುವ ಬಗ್ಗೆ ಉತ್ಸಾಹ ತೋರಿದಂತಿಲ್ಲ. ಆದರೆ ಇತ್ತೀಚೆಗೆ ಇದರಿಂದ ಆಗಿರುವ ಗೋಜಲು ಅಸಹನೀಯವಾಗಿದೆ. ಒಂದೊಂದು ಕಡೆ ಒಂದೊಂದು ಧಾಟಿಯಲ್ಲಿ, ಒಂದೊಂದು ಕಡೆ ಒಂದೊಂದು ಕಾಲಾವಧಿಯಲ್ಲಿ ಇದನ್ನು ಹಾಡುವ ಮೂಲಕ ನಾಡಗೀತೆಗೆ ಇರಬೇಕಾದ ಘನತೆ ಮತ್ತು ಗಾಂಭೀರ್ಯವನ್ನೇ ಹಾಳು ಮಾಡುತ್ತಿದ್ದೇವೆ ಅನಿಸುತ್ತಿದೆ. ಏನಾದರೂ ಮಾಡಿ ಈ ಗೊಂದಲವನ್ನು ಬಗೆಹರಿಸಿ ಎಂದು ಬಹಳಷ್ಟು ಕಡೆಯಿಂದ ಪ್ರಾಧಿಕಾರಕ್ಕೆ ಒತ್ತಡಗಳು ಬಂದದ್ದಿದೆ. ರಾಷ್ಟ್ರಕವಿ ಕುವೆಂಪು ಅವರು ಬರೆದ 'ಭಾರತ ಜನನಿಯ ತನುಜಾತೆ' ಎಂಬ ಹಾಡಿನಲ್ಲಿರುವ 'ಸರ್ವಜನಾಂಗದ ಶಾಂತಿಯ ತೋಟ' ಎಂಬ ಭಾಗವನ್ನು ಹಾಗೇ ಉಳಿಸಿಕೊಂಡು, ಅದುವೇ ಎಲ್ಲ ಜಾತಿ-ಧರ್ಮಗಳ ಜನಸಮುದಾಯಕ್ಕೆ ಸಲ್ಲಿಸುವ ದೊಡ್ಡ ಗೌರವವೆಂದು ಎಲ್ಲರೂ ಭಾವಿಸುವಂತೆ ಕೋರಿಕೊಂಡು, ರಾಷ್ಟ್ರಗೀತೆ ಹಾಡಲು ಬೇಕಾಗುವ

ಸಮಯವನ್ನೇ ನಾಡಗೀತೆಗೂ ನಿಗದಿಪಡಿಸಿ ಹಾಡಬೇಕೆಂಬ ನಿಯಮವನ್ನು ಸರ್ಕಾರ ರೂಪಿಸಬೇಕು. ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಒಂದೇ ಧಾಟಿಯನ್ನೂ ನಿಗದಿಗೊಳಿಸಬೇಕು. ಬಹು ದೀರ್ಘವಾಗಿದ್ದ ರಾಷ್ಟ್ರಗೀತೆ (ಜನಗಣ ಮನ)ಯನ್ನು ಸಂಕ್ಷಿಪ್ತಗೊಳಿಸಿ ಕೇಂದ್ರ ಸರ್ಕಾರ ಅಂಗೀಕರಿಸಿದ್ದು ನಮ್ಮ ನಾಡಗೀತೆಗೂ ಮಾದರಿಯಾಗಬೇಕು.

## ಶಿಫಾರಸು

**ಭಾರತದ ರಾಷ್ಟ್ರಗೀತೆಯಾದ 'ಜನಗಣ ಮನ' ಹಾಡುವ ಕ್ರಮದಲ್ಲಿಯೇ, ನಿರ್ದಿಷ್ಟ ಕಾಲಾವಧಿ ನಿಗದಿಪಡಿಸಿ ನಾಡಗೀತೆ ಹಾಡುವ ನಿಯಮ ರೂಪಿಸುವುದು.**

೦

# ೨.೧
# ಉದ್ಯೋಗ ಭರವಸೆ

೧ನೇ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಈಗಾಗಲೇ ಕರ್ನಾಟಕ ಸರ್ಕಾರವು ಉದ್ಯೋಗದಲ್ಲಿ ಐದರಷ್ಟು ಒಳಮೀಸಲಾತಿ ನೀಡಿದ್ದಾಗಿದೆ. ಇದರಿಂದ ನಿರೀಕ್ಷಿತ ಮಟ್ಟದಲ್ಲಿ ಕನ್ನಡ ಪರವಾದ ಆಕರ್ಷಣೆಗಳು ವಿದ್ಯಾರ್ಥಿಗಳಲ್ಲಾಗಲೀ ಪಾಲಕವರ್ಗದಲ್ಲಾಗಲೀ ಕಾಣುತ್ತಿಲ್ಲ. ಇದಕ್ಕಿಂತ ಹೆಚ್ಚಿನ ಪ್ರೋತ್ಸಾಹವನ್ನು ಕನ್ನಡ ಜನತೆ ನಿರೀಕ್ಷಿಸುತ್ತಿದೆ. ದಶಕಗಳಿಂದ ಕನ್ನಡಪರ ಹೋರಾಟಗಾರರು, ಕನ್ನಡ ಮಾಧ್ಯಮದಲ್ಲಿ ಓದಿಸಿದ ಪಾಲಕರು ಮಾಡುತ್ತ ಬಂದಿರುವ ಆಗ್ರಹಕ್ಕೆ ಒಂದು ಸಕಾರಾತ್ಮಕ ಅಂತ್ಯ ಹಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಉದ್ಯೋಗ ಭರವಸೆಯ ದಿಟ್ಟ ಹೆಜ್ಜೆಯೊಂದನ್ನು ಸರ್ಕಾರ ನೀಡಲೇಬೇಕಾಗಿದೆ.

**ಶಿಫಾರಸು**

**ಕನಿಷ್ಠ ಹತ್ತು ವರ್ಷ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಕನಿಷ್ಠ ಐದರಷ್ಟು ಒಳಮೀಸಲಾತಿ ಎಂಬ ನಿಯಮದ ಬದಲಿಗೆ, ಉದ್ಯೋಗದಲ್ಲಿ ಮೊದಲ ಆದ್ಯತೆ ಎಂಬ ಒಂದೇ ಒಂದು ಸಾಲಿನ ಸರ್ಕಾರಿ ಆದೇಶ ಸೇರ್ಪಡೆಯಾದಲ್ಲಿ ಇಡೀ ರಾಜ್ಯದಲ್ಲಿ ನಿರೀಕ್ಷೆಗೂ ಮೀರಿ ಕನ್ನಡ ಪರವಾದ ಮನಸ್ಸುಗಳು ಹುಟ್ಟಿಕೊಳ್ಳುತ್ತವೆ. ಇಂಥ ಒಂದು ನಿಯಮ ಜಾರಿಗೊಳಿಸುವುದರಿಂದ ಕೆಲವು ಆಸಕ್ತ ವಲಯದವರು ನ್ಯಾಯಾಲಯದ ಮೊರೆಹೋಗುವ ಸಾಧ್ಯತೆಯೂ ಇದೆ. ಕಾನೂನು ತಜ್ಞರೊಂದಿಗೆ ಚರ್ಚೆ ನಡೆಸಿ, ಅಂಥ ಯಾವುದೇ ಅಡೆತಡೆಗಳು ಎದುರಾಗದಂತೆ ನಿಯಮ ರೂಪಿಸಬೇಕು.**

❍

# ೨.೨
# ಪರಭಾಷಾ ಕಾರ್ಮಿಕರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕನ್ನಡ ಕಲಿಕಾ ಕೇಂದ್ರ

**ಬೆಂ**ಗಳೂರು ಮತ್ತು ಇನ್ನುಳಿದ ಕೆಲವು ಮಹಾನಗರಗಳಲ್ಲಿ ಕೇಂದ್ರ ಸ್ವಾಮ್ಯದ ಮತ್ತು ಅಂತರರಾಷ್ಟ್ರೀಯ ಹೂಡಿಕೆದಾರರ ಬಹಳಷ್ಟು ಕಾರ್ಖಾನೆಗಳೂ, ಕಂಪನಿಗಳೂ ಇವೆ. ಅಲ್ಲಿರುವ ಕಾರ್ಮಿಕರಲ್ಲಿ ಹೊರನಾಡುಗಳಿಂದ ಬಂದವರ ಸಂಖ್ಯೆಯೂ ಹೆಚ್ಚಿದೆ. ಅವರೆಲ್ಲ ಕರ್ನಾಟಕದ ನೆಲ, ಜಲ, ಗಾಳಿ ಮತ್ತು ಇತರೇ ಸಂಪತ್ತನ್ನು ಅನುಭವಿಸು ತ್ತಿರುವವರು. ಕರ್ನಾಟಕದ ರಾಜ್ಯಭಾಷೆ, ಕಲೆ, ಸಂಸ್ಕೃತಿ, ಇತಿಹಾಸಗಳ ಅರಿವು ಅವರಿಗೆ ಆಗಬೇಕು. 'ಕರ್ನಾಟಕದಲ್ಲಿ ಇರುವ ಎಲ್ಲರೂ ಕನ್ನಡಿಗರೇ' ಎಂಬ ಮಾತಿಗೆ ಆಗ ಮಾತ್ರವೇ ಅರ್ಥ ಬರುತ್ತದೆ.

ನಮ್ಮ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರ ಸಂಖ್ಯೆ ಕೂಡ ಗಣನೀಯವಾಗಿದೆ. ಅವರೂ ಕೂಡ ಕನ್ನಡದ ಮುಖ್ಯ ವಾಹಿನಿಯಲ್ಲಿ ಸೇರುವಂತೆ ನೋಡಿಕೊಳ್ಳಬೇಕಾಗಿದೆ. ಪ್ರಯೋಗಾರ್ಥವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಾರ್ಮಿಕರಿಗಾಗಿ ಕನ್ನಡ ಜಾಗೃತಿ ಕಾರ್ಯಕ್ರಮಗಳನ್ನೂ, ಅಲ್ಪಸಂಖ್ಯಾತರಿಗಾಗಿ ಕನ್ನಡ ಕಲಿಕಾ ಶಿಬಿರಗಳನ್ನೂ (ಮೂರು ತಿಂಗಳ ಕಾಲಾವಧಿಯದು) ೬೫ ಕೇಂದ್ರಗಳಲ್ಲಿ ಆರಂಭಿಸಿದೆ. ಈ ಪ್ರಯೋಗಕ್ಕೆ ಉತ್ತೇಜನಕಾರಿಯಾದ ಪ್ರತಿಕ್ರಿಯೆ ಸಿಕ್ಕಿದೆ. ಮೂರು ತಿಂಗಳ ಅವಧಿಯ ಇಂತಹ ಶಿಬಿರಗಳಲ್ಲಿ ಬಹಳಷ್ಟು ಕನ್ನಡೇತರರು ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಕಲಿತಿದ್ದಾರೆ. ಈ ಹಿನ್ನೆಲೆಯಲ್ಲಿ ಇದೊಂದು ನಿರಂತರವಾಗಿ ನಡೆಯುವ ಸರ್ಕಾರದ ಕಾರ್ಯಕ್ರಮವಾಗಬೇಕು.

### ಶಿಫಾರಸುಗಳು

ಅ) **ಕನ್ನಡದ ಮುಖ್ಯವಾಹಿನಿಗೆ ಈ ರಾಜ್ಯದ ಕನ್ನಡೇತರ ಕಾರ್ಮಿಕವರ್ಗ ಮತ್ತು ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತರು ಸೇರಬೇಕಾದ ಅನಿವಾರ್ಯತೆ ಇರುವುದರಿಂದ ಸರ್ಕಾರವು ಶಿಕ್ಷಣನೀತಿಯಲ್ಲಿ ಹೊಸ ನಿಯಮಾವಳಿಯೊಂದನ್ನು ಸೇರಿಸಿ, ಅವರಿಗಾಗಿ**

ಪ್ರತ್ಯೇಕ ಕಲಿಕಾ ಕೇಂದ್ರಗಳನ್ನು ಆರಂಭಿಸಬೇಕು. ಅದರ ಎಲ್ಲ ವೆಚ್ಚವನ್ನು ತಾನೇ ನಿರ್ವಹಿಸಬೇಕು.

ಆ) ಎಲ್ಲ ಸಾರ್ವಜನಿಕ ಉದ್ದಿಮೆಗಳಲ್ಲಿ, ಕೇಂದ್ರ ಸರ್ಕಾರದ ಇಲಾಖೆಗಳಲ್ಲಿ ಹಾಗೂ ಭಾರೀ ಉದ್ಯಮಗಳಲ್ಲಿ, ಬ್ಯಾಂಕು ಇತ್ಯಾದಿ ವಾಣಿಜ್ಯ ಕೇಂದ್ರಗಳಲ್ಲಿ ಹಾಗೂ ರಾಜ್ಯ ಸರ್ಕಾರದ ಉದ್ಯಮಗಳಲ್ಲಿ 'ಕನ್ನಡ ಕೇಂದ್ರ'ಗಳನ್ನು ಆರಂಭಿಸುವಂತೆ ಪರವಾನಗಿ ಕೊಡುವ ಹಂತದಲ್ಲಿಯೇ ನಿಯಮವನ್ನು ಜಾರಿಗೊಳಿಸಬೇಕು. ಈ 'ಕನ್ನಡ ಕೇಂದ್ರ'ಗಳಲ್ಲಿ ನಿಯಮಿತವಾಗಿ ಕನ್ನಡ ಕಲಿಕಾ ಶಿಬಿರಗಳನ್ನು ನಡೆಸುವಂತೆ ನಿಯಮ ರೂಪಿಸಬೇಕು.

ಇ) ಕರ್ನಾಟಕಕ್ಕೆ ಬಂದು ವಾಸಿಸುತ್ತಿರುವ ಪ್ರತಿಯೊಬ್ಬ ಕನ್ನಡೇತರರೂ ಒಂದು ವರ್ಷದ ಒಳಗೆ ಕನಿಷ್ಠ ಏಳನೆಯ ತರಗತಿಯ ಕನ್ನಡ ಪಠ್ಯವನ್ನು ಪರೀಕ್ಷೆಗಾಗಿ ಓದಿ ಉತ್ತೀರ್ಣರಾಗಲೇ ಬೇಕು ಎಂಬ ನಿಯಮವನ್ನು ಜಾರಿಗೊಳಿಸಬೇಕು.

ಈ) ಕನ್ನಡೇತರರಿಗೆ ಕನ್ನಡವನ್ನು ಕಲಿಸುವ ಗಣಕಯೋಜಿತ (ಆನ್‌ಲೈನ್) ವ್ಯವಸ್ಥೆಯನ್ನು ಸರ್ಕಾರವು ಉಚಿತವಾಗಿ ನಡೆಸಬೇಕು. ಈ ಗಣಕ ತರಗತಿಗಳ ಲಿಂಕ್‌ಗಳನ್ನು ಸರ್ಕಾರದ ಅಂತರ್ಜಾಲ ತಾಣಗಳಲ್ಲಿ ಮಾತ್ರವೇ ಅಲ್ಲದೆ ಎಲ್ಲಾ ಕನ್ನಡಪರ ಸಂಸ್ಥೆಗಳ ಅಂತರ್ಜಾಲ ತಾಣದಲ್ಲಿ ಪ್ರಧಾನವಾಗಿ ಕಾಣುವಂತೆ ವ್ಯವಸ್ಥೆಯಾಗಬೇಕು.

ಉ) ಕನ್ನಡೇತರರಿಗೆ ಕನ್ನಡ ಕಲಿಸಲು, 'ಕನ್ನಡದ ಮೂಲಕವೇ ಕನ್ನಡವನ್ನು ಕಲಿಸುವ, ಅತಿ ಕಡಿಮೆ ಆಂಗ್ಲ ಭಾಷೆ ಬಳಸುವ' ಪಠ್ಯವನ್ನು ರೂಪಿಸಬೇಕು. ಈ ಪಠ್ಯವು ಅಂತರ್ಜಾಲದಲ್ಲಿ ಮಾತ್ರವಲ್ಲದೆ ಮುದ್ರಿತ ಪುಸ್ತಕವಾಗಿಯೂ ಎಲ್ಲೆಡೆ ಸಿಗುವಂತಾಗಬೇಕು.

ಊ) ಇಂತಹ ಪಠ್ಯವನ್ನು ಓದಿ ಉತ್ತೀರ್ಣರಾಗುವವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇರುವಂತಹ 'ಕಾವ', 'ಜಾಣ', 'ರತ್ನ' ಪರೀಕ್ಷೆಗಳನ್ನು ಬರೆಯಲು ಮತ್ತು ಆಸಕ್ತರು ಕನ್ನಡ ಕಲಿಕೆ ಮುಂದುವರಿಸಲು ಅವಕಾಶಗಳನ್ನು ಒದಗಿಸಬೇಕು.

❍

## ೨.೩
## ಸರೋಜಿನಿ ಮಹಿಷಿ ವರದಿಯ ಪರಿಷ್ಕರಣೆ

**ಕ**ರ್ನಾಟಕದಲ್ಲಿನ ಉದ್ಯಮಗಳಲ್ಲಿ ಕಾರ್ಮಿಕರು ಹಾಗೂ ತಂತ್ರಜ್ಞರನ್ನು ಹಾಗೂ ಆಡಳಿತವರ್ಗದವರನ್ನು ನೇಮಿಸಿಕೊಳ್ಳುವಾಗ ಕನ್ನಡಿಗರಿಗೆ ಆದ್ಯತೆ ಸಿಗಬೇಕೆಂಬ ಕೂಗು ಅನೇಕ ವರ್ಷಗಳಿಂದ ಇದೆ. ಇದನ್ನು ಸಾಧಿಸಲೆಂದು ಕರ್ನಾಟಕ ಸರ್ಕಾರವು ನೇಮಿಸಿದ್ದ ಸರೋಜಿನಿ ಮಹಿಷಿ ಸಮಿತಿಯು ನೀಡಿರುವ ವರದಿಯು ಸರ್ಕಾರದ ಬಳಿ ಇದೆ. ಅನುಸರಣೆಯ ಕಾರ್ಯವೂ ನಡೆಯುತ್ತಿದೆ. ಆದರೆ ಈ ವರದಿಯು ಸಿದ್ಧವಾಗಿ ಎರಡು ದಶಕಗಳು ದಾಟಿರುವುದರಿಂದ ಆ ವರದಿಯಲ್ಲಿನ ಸಲಹೆಗಳನ್ನು ಆಧುನಿಕ ಕಾಲಘಟ್ಟಕ್ಕೆ ಸರಿಹೊಂದುವಂತೆ ಪರಿಷ್ಕರಿಸುವ ಅಗತ್ಯವಿದೆ.

**ಶಿಫಾರಸು**

**ಸರೋಜಿನಿ ಮಹಿಷಿಯ ವರದಿಯು ಸಿದ್ಧವಾಗಿ ಎರಡು ದಶಕಗಳಿಗೂ ಹೆಚ್ಚು ಕಾಲವಾಗಿದೆ. ಈ ವರದಿಯಲ್ಲಿನ ವಿವರಗಳು ಕನ್ನಡಿಗರಿಗೆ ನ್ಯಾಯ ದೊರಕಿಸಿ ಕೊಡುವಂತಿದ್ದರೂ ಆಧುನಿಕ ಕಾಲಕ್ಕೆ ಹೊಂದುವಂತೆ ಇಲ್ಲಿರುವ ಅನೇಕ ವಿವರಗಳನ್ನು ಪರಿಷ್ಕರಿಸುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಸರೋಜಿನಿ ಮಹಿಷಿ ವರದಿಯ ಪರಿಷ್ಕರಣೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಜವಾಬ್ದಾರಿಯನ್ನು ನೀಡಬಹುದು ಅಥವಾ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಒಳಗೊಂಡಂತಹ ವಿಶೇಷ ಸಮಿತಿಯೊಂದನ್ನು ರಚಿಸಬೇಕು. ಈ ಸಮಿತಿಯು ಕ್ಲುಪ್ತ ಅವಧಿಯಲ್ಲಿ ಪರಿಷ್ಕಾರಗಳನ್ನು ಸೂಚಿಸಿ ಸರ್ಕಾರಕ್ಕೆ ಸಲಹೆಗಳನ್ನು ನೀಡುವಂತಾಗಬೇಕು. ಆ ಸಲಹೆಗಳನ್ನು ಸರ್ಕಾರವು ಶೀಘ್ರವಾಗಿ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು.**

❍

# ೩.೧

# ಕನ್ನಡ ಮಾಧ್ಯಮದಲ್ಲಿ ಓದಿದ ಹೊರನಾಡ ವಿದ್ಯಾರ್ಥಿಗಳಿಗೆ ಬೆಂಬಲ

ಒಳನಾಡಿನ ಗಡಿಭಾಗಗಳ ಸಮಸ್ಯೆಗಳು–ಸಂಕಷ್ಟಗಳು ಒಂದು ಬಗೆಯದಾದರೆ, ಹೊರನಾಡಿನಲ್ಲಿರುವ (ನೆರೆ ನಾಡಿನಲ್ಲಿರುವ) ಗಡಿಭಾಗದ ಕನ್ನಡಿಗರ ಸಮಸ್ಯೆ ಇನ್ನೊಂದು ಬಗೆಯದು. ಕೇರಳ ರಾಜ್ಯಕ್ಕೆ ಸೇರಿದ ಕಾಸರಗೋಡು ಜಿಲ್ಲೆಯೊಂದರಲ್ಲೇ ಕನ್ನಡ ಮಾಧ್ಯಮದ ಶಾಲೆ–ಕಾಲೇಜುಗಳ ಸಂಖ್ಯೆ ಸುಮಾರು ಮೂರುನೂರರಷ್ಟು. ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿರುವ ಗಡಿ ಭಾಗಗಳಲ್ಲೂ ಕನ್ನಡ ಶಾಲೆಗಳಿವೆ. ಮಹಾರಾಷ್ಟ್ರದ ಸೊಲ್ಲಾಪುರ ವಿಭಾಗದಲ್ಲಿನ ನಾಲ್ಕು ತಾಲ್ಲೂಕುಗಳಲ್ಲಿ ಕನ್ನಡಿಗರ ಸಂಖ್ಯೆಯಂತೂ ಸಾಕಷ್ಟು ದೊಡ್ಡದಿದೆ. ಇಂತಹ ಕನ್ನಡ ಶಾಲೆಗಳ ಸಂಖ್ಯೆ ಐನೂರನ್ನು ದಾಟುತ್ತದೆ. ಈ ಶಾಲೆಗಳಲ್ಲಿ ಓದಿ, ಎಸ್.ಎಸ್.ಎಲ್.ಸಿ. ಪಾಸು ಮಾಡಿದ ವಿದ್ಯಾರ್ಥಿಗಳಿಗೆ ಅಲ್ಲಿಯ ಸರ್ಕಾರಗಳ ಶೈಕ್ಷಣಿಕ ವ್ಯವಸ್ಥೆಯಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಇಲ್ಲದಿದ್ದಾಗ, ಕನ್ನಡ ಮಾಧ್ಯಮದಲ್ಲಿ ಓದಿದವರೆಂಬ ಒಂದೇ ಕಾರಣಕ್ಕೆ ಆ ರಾಜ್ಯದಲ್ಲಿ ಅವರು ಉದ್ಯೋಗ ವಂಚಿತರಾಗುತ್ತಾರೆ. ಆಗ ಕರ್ನಾಟಕವನ್ನು ಉದ್ಯೋಗಕ್ಕಾಗಿ ಆಯ್ಕೆಮಾಡಿಕೊಳ್ಳುವುದು ಅವರಿಗೆ ಅನಿವಾರ್ಯವೇ ಆಗಿರುತ್ತದೆ. ಈಗಾಗಲೇ ನಮಗೆ ಸಿಕ್ಕ ಮಾಹಿತಿಯಂತೆ ಹೊರನಾಡಿನಲ್ಲಿ ಕನ್ನಡ ಮಾಧ್ಯಮ ಆಯ್ಕೆ ಮಾಡಿಕೊಂಡು ಓದಿದವರಿಗೆ ಕರ್ನಾಟಕದಲ್ಲಿ ಸಂದರ್ಶನಕ್ಕೆ ಕರೆಯುವುದಿಲ್ಲ. ಉನ್ನತ ಶಿಕ್ಷಣಕ್ಕೂ ಮೀಸಲಾತಿ ಇಲ್ಲ. ಹೀಗಾಗಿ ಭಾಷಾಭಿಮಾನದ ಬೆನ್ನು ಹತ್ತಿದ ಯುವಕರ ಭವಿಷ್ಯ ಕತ್ತಲಲ್ಲಿದೆಯೆಂಬ ಭಾವನೆ ಈಗಾಗಲೇ ಆ ಭಾಗದಲ್ಲಿದೆ.

### ಶಿಫಾರಸುಗಳು

ಅ) **ಹೊರನಾಡಿನಲ್ಲಿರುವ ಕನ್ನಡಿಗರು ಅಲ್ಲಿಯ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದಿ ಉನ್ನತ ಶಿಕ್ಷಣಕ್ಕೆ ಅರ್ಹತೆ ಪಡೆದೂ, ಅಂಥ ಸೌಲಭ್ಯ ಆ ರಾಜ್ಯದಲ್ಲಿ ಇಲ್ಲದೇ ಕರ್ನಾಟಕ ರಾಜ್ಯದ**

ಉನ್ನತ ಶಿಕ್ಷಣಾಲಯಗಳಿಗೆ ಆಶ್ರಯ ಬಯಸಿ ಅರ್ಜಿ ಸಲ್ಲಿಸಿದಲ್ಲಿ ವಿಶೇಷ ಮೀಸಲಾತಿಯ ಮೂಲಕ ಅವರಿಗೆ ಉನ್ನತ ಶಿಕ್ಷಣಕ್ಕೆ ಸರ್ಕಾರವು ಅವಕಾಶ ಮಾಡಿಕೊಡಬೇಕು.

ಆ) ಕನ್ನಡ ಮಾಧ್ಯಮದಲ್ಲಿ ಓದಿದವರೆಂಬ ಕಾರಣಕ್ಕಾಗಿಯೇ ಅವರವರ ನಾಡಿನಲ್ಲಿ ಉದ್ಯೋಗವಂಚಿತರಾಗುವ ಸಮಸ್ಯೆಯ ಗಂಭೀರತೆಯನ್ನು ಸರಕಾರ ಮನಗಂಡು, ಕರ್ನಾಟಕದ ವಿವಿಧ ಇಲಾಖೆಗಳಲ್ಲಿ ತೆರವಾದ ಸ್ಥಳಗಳಿಗೆ ಭರ್ತಿಮಾಡಿಕೊಳ್ಳುವಾಗ, ಹೊರನಾಡಿನಲ್ಲಿ ಓದಿ ಅರ್ಹತಾ ಪರೀಕ್ಷೆಗಳಲ್ಲಿ ತೇರ್ಗಡೆಯಾದವರ ಅರ್ಜಿಗಳನ್ನೂ ಪುರಸ್ಕರಿಸಿ ಸಂದರ್ಶನಕ್ಕೆ ಕರೆಯಬೇಕು. ಉದ್ಯೋಗದಲ್ಲಿಯೂ ಅವರಿಗೆ ಶೇ. ೫ರಷ್ಟು ಮೀಸಲಾತಿಯನ್ನು ನಿಗದಿಪಡಿಸಬೇಕು.

ಇ) ಗಡಿಯಾಚೆಗಿನ ಶಾಲೆಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯ ಹಾಗೂ ಮಾರ್ಗದರ್ಶಿ ಪುಸ್ತಕಗಳು ಕನ್ನಡದಲ್ಲಿ ದೊರೆಯುತ್ತಿಲ್ಲ. ಸರ್ಕಾರವು ಈ ಬಗ್ಗೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕು. ಈ ಅನುಕೂಲ ನಿರಂತರವಾಗಿರಬೇಕು.

ಈ) ಗಡಿಯಾಚೆಗಿನ ಕನ್ನಡಿಗರ ಮಕ್ಕಳಿಗೆ ಕನ್ನಡ ಬಾಲವಾಡಿಗಳ ಕೊರತೆ ಇದೆ. ಅಲ್ಲಿಯ ಜನ ಕನ್ನಡ ಬಾಲವಾಡಿಗಳನ್ನು ಆರಂಭಿಸುವುದಕ್ಕೆ ಮತ್ತು ಹೊಸ ತಲೆಮಾರಿನ ಹುಡುಗರು ಕನ್ನಡದಲ್ಲಿ ಉಳಿಯಲು ಅನುವಾಗುವುದಕ್ಕೆ ಸರ್ಕಾರವು ವಿಶೇಷ ಸಹಾಯಧನವನ್ನು ಬಿಡುಗಡೆ ಮಾಡಬೇಕು.

ಉ) ಗಡಿಯಾಚೆಗಿನ ಕನ್ನಡ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಆರ್ಥಿಕವಾಗಿ ಬಹುಪಾಲು ಹಿಂದುಳಿದವರು. ಈ ವಿದ್ಯಾರ್ಥಿಗಳಿಗೆ ವಿದ್ಯಾಶುಲ್ಕವನ್ನು ಕಟ್ಟುವುದು, ಪಠ್ಯಗಳನ್ನು ಕೊಳ್ಳುವುದು, ಸಮವಸ್ತ್ರ ಕೊಳ್ಳುವುದು ಕಷ್ಟದ ಕೆಲಸ. ಈ ಹಿನ್ನೆಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿಶೇಷ ಸಹಾಯಧನ ಒದಗಿಸುವ ಯೋಜನೆಗೆ ಸರ್ಕಾರವು ಚಾಲನೆ ನೀಡಬೇಕು. ಇಲ್ಲವಾದರೆ ಈ ಬಡ ವಿದ್ಯಾರ್ಥಿಗಳು ಶಾಲೆಯಿಂದ ದೂರ ಉಳಿಯುವ ಸಾಧ್ಯತೆಯೇ ಹೆಚ್ಚು ಎಂಬುದನ್ನು ಮನಗಂಡು ಈ ನಿಟ್ಟಿನಲ್ಲಿ ಶೀಘ್ರವಾಗಿ ಕಾರ್ಯಪ್ರವೃತ್ತವಾಗಬೇಕಾಗಿದೆ.

೦

# ೩.೨
# ಹೊರನಾಡ ಸ್ನಾತಕೋತ್ತರ ಕೇಂದ್ರಗಳಲ್ಲಿ ಓದುವವರಿಗೆ ವಿಶೇಷ ನೆರವು

**ಹೊ**ರರಾಜ್ಯಗಳಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದರೆ ಪ್ರೋತ್ಸಾಹದ ಕೊರತೆಯಿಂದಾಗಿ ಅಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತ ಬಂದು, ಕೆಲವು ಕಡೆ ಕನ್ನಡ ಸ್ನಾತಕೋತ್ತರ ವಿಭಾಗಗಳೆಲ್ಲ ಮುಚ್ಚುವ ಹಂತಕ್ಕೆ ಬಂದಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿದೆ. ಕನ್ನಡ ಸ್ನಾತಕೋತ್ತರ ಪದವಿಗೆ ಹೆಸರು ನೋಂದಾಯಿಸಿದ ವಿದ್ಯಾರ್ಥಿಗಳಿಗೆ ಪ್ರಾಧಿಕಾರದಿಂದ ಮಾಸಿಕ ಎರಡು ಸಾವಿರ ರೂಪಾಯಿಯಂತೆ 'ವಿದ್ಯಾರ್ಥಿ ವೇತನ' ನೀಡುವ ತೀರ್ಮಾನ ಕೈಗೊಂಡು, ಅದಕ್ಕೆ ಸಾಕಷ್ಟು ಪ್ರಚಾರವನ್ನೂ ನೀಡಲಾಗಿದೆ. ಇದರಿಂದ ಉತ್ತೇಜಿತರಾದ ವಿದ್ಯಾರ್ಥಿಗಳು ಪುನಃ ಮನಸ್ಸು ಬದಲಾಯಿಸಿ ಸ್ನಾತಕೋತ್ತರ ಅಧ್ಯಯನಕ್ಕೆ ಮುಂದಾದುದರಿಂದ, ಮುಚ್ಚುವ ಸ್ಥಿತಿಯಲ್ಲಿದ್ದ ಹೊರನಾಡಿನ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಕೇಂದ್ರಗಳಲ್ಲಿ ಈಗ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಒಂದು ಪ್ರಯೋಗಾರ್ಥವಾಗಿ ಪ್ರಾಧಿಕಾರವು ಮಾಡಿದ ಈ ಪ್ರಯತ್ನ ಯಶಸ್ವಿಯಾದುದರಿಂದ ಆ ಭಾಗಗಳ ಜನರು ಶಾಶ್ವತ ರೂಪದಲ್ಲಿ ಇಂಥ ಒಂದು ನಿಯಮ ಸರ್ಕಾರದ ಕಡೆಯಿಂದ ಆಗಬೇಕೆಂದು ಬಯಸುತ್ತಿದ್ದಾರೆ.

### ಶಿಫಾರಸುಗಳು

**ಅ) ಹೊರನಾಡುಗಳಲ್ಲಿ ಇರುವ ಯಾವ ಯಾವ ವಿಶ್ವವಿದ್ಯಾಲಯಗಳು ಕನ್ನಡ ಸ್ನಾತಕೋತ್ತರ ವಿಭಾಗಕ್ಕೆ ಅವಕಾಶ ಮಾಡಿಕೊಟ್ಟಿವೆಯೋ, ಅವು ವಿದ್ಯಾರ್ಥಿಗಳ ಕೊರತೆಯಿಂದ ನಿಂತುಹೋಗದ ಹಾಗೆ ನೋಡಿಕೊಳ್ಳುವುದಕ್ಕಾಗಿ, ಕರ್ನಾಟಕ ಸರ್ಕಾರವು ಅಲ್ಲಿ ಕನ್ನಡದ ಉನ್ನತ ವ್ಯಾಸಂಗ ಮಾಡ ಬಯಸಿದ ಮತ್ತು ಸಂಶೋಧನ ಕಾರ್ಯಕ್ಕೆ ಮುಂದಾದ ಜ್ಞಾನದಾಹಿಗಳಿಗೆ ಮಾಸಿಕವಾಗಿ ಕನಿಷ್ಠ ಎರಡು ಸಾವಿರ ರೂಪಾಯಿಯಂತೆ ಪ್ರೋತ್ಸಾಹಧನ**

ನೀಡುವುದಕ್ಕೆ ಶಿಕ್ಷಣ ಇಲಾಖೆಯ ನಿಯಮಗಳಲ್ಲಿ ಅವಕಾಶ ಕಲ್ಪಿಸಬೇಕು. ಅಲ್ಲದೆ ಹೊರನಾಡಿನಲ್ಲೂ, ಹೊರ ದೇಶಗಳಲ್ಲೂ ಹೊಸದಾಗಿ ಕನ್ನಡ ಅಧ್ಯಯನಪೀಠ ಆರಂಭಿಸಿದ ಸಂದರ್ಭದಲ್ಲಿ, ಅಲ್ಲಿ ಓದುವವರಿಗೂ ಈ ಸೌಲಭ್ಯವನ್ನು ವಿಸ್ತರಿಸಬೇಕು.

ಆ) ಹೊರನಾಡ ವಿಶ್ವವಿದ್ಯಾಲಯಗಳಲ್ಲಿನ ಕನ್ನಡ ಸ್ನಾತಕೋತ್ತರ ಕೇಂದ್ರಗಳಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ ಆಯಾ ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಕರ್ನಾಟಕ ಸರ್ಕಾರದ ಸಹಾಯಧನದೊಂದಿಗೆ ಆಯಾ ವಿಶ್ವವಿದ್ಯಾಲಯಗಳೇ ನಿರ್ಮಿಸುವಂತೆ ಸರಕಾರ ಗಮನಿಸಬೇಕು.

ಇ) ಕರ್ನಾಟಕದೊಳಗಿನ ಗ್ರಂಥಾಲಯಗಳಿಗೆಂದು ಕನ್ನಡ ಪುಸ್ತಕಗಳನ್ನು ಸರ್ಕಾರವು ಕೊಳ್ಳುತ್ತಾ ಇದೆ. ಹೊರನಾಡ ವಿಶ್ವವಿದ್ಯಾಲಯಗಳಲ್ಲಿ ಇರುವ ಕನ್ನಡ ಅಧ್ಯಯನ ಕೇಂದ್ರಗಳಿಗೂ ಈ ಪುಸ್ತಕಗಳು ತಲುಪುವಂತೆ ಸಗಟು ಖರೀದಿ ಪ್ರಮಾಣವನ್ನು ಹೆಚ್ಚಿಸಬೇಕು.

೦

ಶಿಕ್ಷಣ ಕ್ಷೇತ್ರ

## ೩.೩
# ಶಾಲಾ ಸಿಬ್ಬಂದಿಗಳಿಗೆ ವಸತಿ ನಿಲಯ : ಗಡಿಹಳ್ಳಿಗಳಿಗೆ ಮೊದಲ ಆದ್ಯತೆ

ಗ್ರಾಮೀಣ ಹಾಗೂ ಅರಣ್ಯಾವೃತ ಭಾಗಗಳಲ್ಲಿರುವ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುವ ಶಿಕ್ಷಕರಿಗೆ ವಸತಿ ಅನುಕೂಲ ಕಲ್ಪಿಸುವುದಕ್ಕಾಗಿ ಪ್ರಥಮ ಆದ್ಯತೆಯಾಗಿ ಸಿಬ್ಬಂದಿಗಳ ವಸತಿ ನಿಲಯ ಕಟ್ಟಿಕೊಡಬೇಕಾದ ತುರ್ತು ಅಗತ್ಯವಿದೆ. ಈ ಭಾಗಗಳಲ್ಲಿ ಅನೇಕ ಶಿಕ್ಷಕರು ಬೆಳಗ್ಗೆ ಬಂದು ಸಾಯಂಕಾಲ ಶಾಲೆ ಮುಗಿದಂತೆ ಬಸ್ ಹಿಡಿಯಲು ಧಾವಿಸುತ್ತಾರೆ. ಬಸ್ ತಪ್ಪಿಸಿಕೊಂಡರೆ ಆ ರಾತ್ರಿಯನ್ನು ಅವರು ಆ ನಿರ್ಜನ ಪ್ರದೇಶದಲ್ಲಿ ಕಳೆಯಬೇಕಾದ ಸಂದರ್ಭಗಳಿವೆ. ಆದ್ದರಿಂದ ಈಗಾಗಲೇ ಸರ್ಕಾರದ ನಿಯಮದಡಿಯಲ್ಲಿರುವ ವಸತಿ ಕಟ್ಟಡಗಳ ಸೌಲಭ್ಯವನ್ನು ಗಡಿ ಹಾಗೂ ಗುಡ್ಡಗಾಡು ಗ್ರಾಮಗಳ ಶಾಲಾ ಶಿಕ್ಷಕರಿಗೆ ಆದ್ಯತೆಯ ಮೇರೆಗೆ ಕಲ್ಪಿಸಿಕೊಡಬೇಕೆಂಬುದು ಅಧ್ಯಾಪಕವರ್ಗದ ಮತ್ತು ಎಸ್.ಡಿ.ಎಂ.ಸಿಗಳ ಬಹುಕಾಲದ ಬೇಡಿಕೆಯಾಗಿದೆ.

### ಶಿಫಾರಸು

**ಗಡಿ ತಾಲ್ಲೂಕುಗಳ ಹಾಗೂ ಗುಡ್ಡಗಾಡು ಭಾಗದ ಅನೇಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರು ಐವತ್ತು–ಅರುವತ್ತು ಕಿ.ಮೀನಷ್ಟು ದೂರ ಹೋಗಿ ಮನೆ ಮಾಡಿಕೊಂಡಿದ್ದಾರೆ. ಶಿಕ್ಷಕವೃತ್ತಿ ಎಂಬುದು ಶಾಲಾವಧಿಗೆ ಮಾತ್ರ ಸೀಮಿತವಾದುದಲ್ಲ; ಶಾಲೆ ಆರಂಭವಾಗುವುದಕ್ಕಿಂತ ಮೊದಲೂ ಮತ್ತು ಶಾಲೆ ಬಿಟ್ಟ ನಂತರವೂ ಅವರು ಶಿಕ್ಷಕರೇ ಆಗಿರುತ್ತಾರೆ. ಶಾಲೆಯಿಂದ ಕೂಗಳತೆಯಲ್ಲಿ ಇವರೆಲ್ಲ ಇರಬೇಕೆಂಬುದು ಶಿಕ್ಷಣ ತಜ್ಞರ ಮತ್ತು ಚಿಂತಕರ ಅಭಿಪ್ರಾಯವಾಗಿದೆ. ಈ ಕಾರಣವಾಗಿ ಶಿಕ್ಷಕರಿಗೆ ವಸತಿ ನಿಲಯ ಕಲ್ಪಿಸಬೇಕಾದ ಯೋಜನೆ ಜಾರಿಗೊಳಿಸುವಾಗ ಮೊಟ್ಟಮೊದಲ ಆದ್ಯತೆ ಗಡಿ ತಾಲ್ಲೂಕಿನ ಶಾಲೆಗಳಿಗೆ, ಅದರಲ್ಲೂ ಅರಣ್ಯಾವೃತ ನಿರ್ಜನ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ವಸತಿ ನಿಲಯಗಳಿಗೆ ನೀಡಬೇಕು.**

❍

# ೩.೪
# ಕನ್ನಡ ಮಾಧ್ಯಮ ಪ್ರಶಸ್ತಿ

**ಒಂ**ದನೇ ತರಗತಿಯಿಂದ ಎಸ್.ಎಸ್.ಎಲ್.ಸಿ. ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ ಪಾಸಾದ, ಮತ್ತು ಪಿ.ಯು.ಸಿ. ವರೆಗೆ ಓದಿ ಪಾಸಾದವರಲ್ಲಿ ಹೆಚ್ಚು ಅಂಕ ಪಡೆದ ಮೂರು ವಿದ್ಯಾರ್ಥಿಗಳನ್ನು ಪ್ರತಿ ತಾಲ್ಲೂಕಿನಿಂದ ಆಯ್ಕೆ ಮಾಡಿಕೊಂಡು, ವಿಭಾಗವಾರು ಸಮಾರಂಭ ಗಳನ್ನು ಏರ್ಪಡಿಸಿ, ಕಳೆದ ಮೂರು ವರ್ಷಗಳಿಂದ ಪ್ರಾಧಿಕಾರವು **ಕನ್ನಡ ಮಾಧ್ಯಮ ಪ್ರಶಸ್ತಿ** ನೀಡಿ ಗೌರವಿಸುತ್ತಾ ಬಂದಿದೆ. ಇಡೀ ರಾಜ್ಯಕ್ಕೆ ಪ್ರಥಮ ಮೂರು ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ೧೫ ಸಾವಿರ, ೧೪ ಸಾವಿರ, ೧೩ ಸಾವಿರ ಹಾಗೂ ತಾಲ್ಲೂಕು ಮಟ್ಟದಲ್ಲಿ ಮೂರು ಸ್ಥಾನ ಪಡೆದವರಿಗೆ ೮ ಸಾವಿರ, ೭ ಸಾವಿರ, ೬ ಸಾವಿರ ರೂಪಾಯಿ ಗಳನ್ನು ನಗದು ರೂಪದಲ್ಲಿ ನೀಡಿದ್ದಲ್ಲದೆ, ಕನ್ನಡ ಸಂಖ್ಯೆ ಇರುವ ತಲಾ ಒಂದು ಎಚ್.ಎಂ.ಟಿ. ಕೈಗಡಿಯಾರ, ಅಭಿನಂದನ ಪತ್ರ, ಸ್ಮರಣಿಕೆ, ಎರಡು ನಿಘಂಟು (ಕನ್ನಡ–ಕನ್ನಡ ಮತ್ತು ಕನ್ನಡ–ಇಂಗ್ಲಿಷ್), ಕೈಚೀಲ, ಪೆನ್ನುಗಳನ್ನು ನೀಡಿ ಗೌರವಿಸಿದೆ. ಈ ಪ್ರಶಸ್ತಿಗೆ ಭಾಜನರಾದ ವಿದ್ಯಾರ್ಥಿಗಳಿಗೆ, ಅವರ ತಾಯ್ತಂದೆಯರಿಗೆ ಮತ್ತು ಕರೆದುಕೊಂಡು ಬಂದ ಶಿಕ್ಷಕರಿಗೆ ಪ್ರಯಾಣ ವೆಚ್ಚವನ್ನೂ, ಊಟ–ಉಪಹಾರದ ವ್ಯವಸ್ಥೆಯನ್ನೂ ಮಾಡಿದ್ದಿದೆ. ರಾಜ್ಯದ ೧೭೫ ತಾಲ್ಲೂಕುಗಳಿಂದ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯ ತಲಾ ಆರು ವಿದ್ಯಾರ್ಥಿಗಳಂತೆ ಸುಮಾರು ೧,೨೦೦ರಷ್ಟು ವಿದ್ಯಾರ್ಥಿಗಳು ಪ್ರತಿವರ್ಷ ಪ್ರಾಧಿಕಾರದಿಂದ ಈ ಮಾಧ್ಯಮ ಪ್ರಶಸ್ತಿಯನ್ನು ಪಡೆದಿದ್ದಾರೆ. ಇದರಿಂದ ಇಡೀ ರಾಜ್ಯದಲ್ಲಿ ಕನ್ನಡ ಮಾಧ್ಯಮದ ಬಗ್ಗೆ ಹೊಸ ರೀತಿಯ ಸಂಚಲನ ಆರಂಭವಾಗಿರುವುದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಿದೆ. ಸಂಬಂಧಪಟ್ಟ ವಿದ್ಯಾರ್ಥಿಗಳೂ, ಪಾಲಕರೂ ಧನ್ಯತಾಭಾವವನ್ನು ಅನುಭವಿಸಿದ್ದಾರೆ. **ಈ ಫಲಾನುಭವಿಗಳೇ ಕಾಲಕ್ರಮೇಣ ಕನ್ನಡದ ನಿಜದನಿಗಳಾಗಿ ನಾಡು ನುಡಿಯ ಅಭಿವೃದ್ಧಿಗೆ ನೆರವಾಗಲಿದ್ದಾರೆ.** ಮುಂದೆ ಇವರೇ ಪಾಲಕರಾದಾಗ ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸುವ ಬದ್ಧತೆಯನ್ನು ತೋರಲಿದ್ದಾರೆ. ಇದು ಭವಿಷ್ಯದಲ್ಲಿ ಕನ್ನಡ ಮನಸ್ಸುಗಳನ್ನು ಗಟ್ಟಿಗೊಳಿಸುವ ಅತ್ಯಂತ ಪ್ರಯೋಜನಕಾರೀ ಪ್ರಯತ್ನವಾಗಿರುವು

ದರಿಂದ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇಲ್ಲವೇ ಶಿಕ್ಷಣ ಇಲಾಖೆಯ ಮೂಲಕ ಇದನ್ನು ಕಡ್ಡಾಯ ಕಾರ್ಯಕ್ರಮವಾಗುವಂತೆ ನಿಯಮ ಮಾಡುವ ಅಗತ್ಯವಿದೆ.

**ಶಿಫಾರಸು**

**೧ನೇ ತರಗತಿಯಿಂದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯ ವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ, ಆಯಾ ತಾಲ್ಲೂಕಿನಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಎರಡೂ ವಿಭಾಗಗಳ ವಿದ್ಯಾರ್ಥಿಗಳನ್ನು ಗುರುತಿಸಿ, ಪ್ರತಿವರ್ಷವೂ ವಿಭಾಗ ಮಟ್ಟದ ಸಮಾರಂಭವನ್ನು ಏರ್ಪಡಿಸಿ, ಅವರಿಗೆ ಮಾಧ್ಯಮ ಪ್ರಶಸ್ತಿಯನ್ನು ಪಾಲಕರ ಸಮ್ಮುಖದಲ್ಲಿ ನೀಡುವ ನಿರಂತರ ಯೋಜನೆಯೊಂದನ್ನು ಸರ್ಕಾರವು ರೂಪಿಸಬೇಕು. ಇದಕ್ಕೆ ಪ್ರತಿವರ್ಷ ಒಂದೂವರೆ ಕೋಟಿ ರೂಪಾಯಿ ಬೇಕಾಗುತ್ತದೆ. ಇದನ್ನು ಆಯವ್ಯಯದಲ್ಲಿ ಸೇರಿಸಿಕೊಂಡು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇಲ್ಲವೇ ಶಿಕ್ಷಣ ಇಲಾಖೆ ನಿರಂತರವಾಗಿ ನಿರ್ವಹಿಸುವಂತೆ ಸರಕಾರ ಆದೇಶ ಹೊರಡಿಸಬೇಕು.**

❍

## ೩.೫
# ಕಾಲೇಜು ವಿದ್ಯಾರ್ಥಿಗಳಿಗೆ ಕನ್ನಡ ಜಾಗೃತಿ

**ಕ**ಳೆದ ಎರಡು ದಶಕದಿಂದ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೊಳಿಸುವ ಯತ್ನಗಳಾಗುತ್ತಾ ಇದೆಯಾದರೂ ಅದು ಅನೇಕ ವಿರೋಧಗಳ ನಡುವೆ ಇನ್ನೂ ಜಾರಿಗೆ ಬಂದಿಲ್ಲ. ಇದೇ ಹಂತದಲ್ಲಿ ಕನ್ನಡವನ್ನು ಭಾಷೆಯಾಗಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆಯಾಗುತ್ತಾ ಇದೆ. ಇದರಿಂದಾಗಿ ಕನ್ನಡದ ವಾತಾವರಣವೇ ಇಲ್ಲದಂತಹ ಪರಿಸ್ಥಿತಿಯು ಅನೇಕ ನಗರಗಳಲ್ಲಿ ಆಗಿದೆ, ಆಗುತ್ತಾ ಇದೆ. ಈ ಬಗ್ಗೆ ಗಮನ ವಿರಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆಂದೇ **ಕನ್ನಡ ಜಾಗೃತಿ** ಕಾರ್ಯಕ್ರಮವನ್ನು ಆಯೋಜಿಸಲು ಪ್ರಾರಂಭಿಸಿತು. ಈ ವರೆಗೆ ಸುಮಾರು ನೂರಕ್ಕೂ ಹೆಚ್ಚು ಕಾಲೇಜುಗಳನ್ನು ಈ ಕಾರ್ಯಕ್ರಮದಡಿಯಲ್ಲಿ ತಲುಪಲಾಗಿದೆ. ಇದು ಸಾಲದು. ಇಂತಹ ಕಾರ್ಯಕ್ರಮಗಳು ನಿರಂತರವಾಗಿ ಆಗಬೇಕು.

### ಶಿಫಾರಸುಗಳು

**೧. ಕಾಲೇಜು ವಿದ್ಯಾರ್ಥಿಗಳಲ್ಲಿ ಕನ್ನಡದ ಬಗೆಗಿನ ಜಾಗೃತಿಯು ನಿರಂತರವಾಗಿ ಇರುವಂತೆ, ಕಾಲೇಜು ಶಿಕ್ಷಣ ಇಲಾಖೆಯ ಮೂಲಕ, ಎಲ್ಲಾ ಕಾಲೇಜುಗಳಲ್ಲಿ ಕನ್ನಡ ಜಾಗೃತಿಯ ಕಾರ್ಯಕ್ರಮವು ನಿಯಮಿತವಾಗಿ ಆಗುವಂತೆ ಆದೇಶ ಹೊರಡಿಸಬೇಕು.**

**೨. ಎಲ್ಲಾ ಕಾಲೇಜುಗಳಲ್ಲಿ ಕನ್ನಡ ಕೋಶವನ್ನು ಆರಂಭಿಸುವಂತಾಗಬೇಕು. ಈ ಕನ್ನಡ ಕೋಶದಲ್ಲಿ ಆಯಾ ಕಾಲೇಜಿನಲ್ಲಿರುವ ಕನ್ನಡೇತರರಿಗೆ ಕನ್ನಡ ಕಲಿಸುವ ಶಿಬಿರಗಳು ಹಾಗೂ ಮೇಲೆ ತಿಳಿಸಿದ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ನಡೆಸಬೇಕು. ಆ ಮೂಲಕ ಕಾಲೇಜು ವಿದ್ಯಾರ್ಥಿಗಳು ಕನ್ನಡದ ವಾತಾವರಣದಲ್ಲಿ ಶಾಶ್ವತವಾಗಿ ಉಳಿಯುವಂತಹ ಪ್ರಯತ್ನಗಳು ಶೀಘ್ರವಾಗಿ ಆಗಬೇಕು. ಈ ಕೆಲಸಗಳನ್ನು ಕಾಲಮಿತಿಯೊಳಗೆ ಜಾರಿಗೊಳಿಸಿದಾಗ ಮಾತ್ರ ಕನ್ನಡಕ್ಕೆ ಇರುವ ಅಪಾಯಗಳನ್ನು ತಪ್ಪಿಸಲು ಸಾಧ್ಯ.**

೦

## ೩.೬
## ವೃತ್ತಿ ಶಿಕ್ಷಣ ಹಾಗೂ ಪದವಿ ಶಿಕ್ಷಣದಲ್ಲಿ ಕನ್ನಡ ಪಠ್ಯವನ್ನು ಕಡ್ಡಾಯಗೊಳಿಸುವ ಬಗ್ಗೆ

**ಈ**ಚಿನ ದಿನಗಳಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ವ್ಯವಹಾರ, ವೃತ್ತಿಶಿಕ್ಷಣಗಳ ಪದವಿ ಮಟ್ಟದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಕಲಿಕೆಯನ್ನು ಹಲವು ನೆಪವೊಡ್ಡಿ ಕಡಿತಗೊಳಿಸುವ ಹುನ್ನಾರಗಳು ಕಾಣಿಸುತ್ತಿವೆ. ಇಂತಹ ಶಿಕ್ಷಣ ಪಡೆದವರು ನಂತರದ ದಿನಗಳಲ್ಲಿ ಯಾವ ಭಾಷೆಯೂ ಬಾರದ ಸ್ಥಿತಿ ತಲುಪುತ್ತಾರೆ ಎಂಬುದನ್ನು ಗಮನಿಸ ಲಾಗಿದೆ. ಇದು ವಿದ್ಯಾರ್ಥಿಯ ಬೆಳವಣಿಗೆಯ ದೃಷ್ಟಿಯಿಂದಲೂ ಕನ್ನಡದ ಬೆಳವಣಿಗೆಯ ದೃಷ್ಟಿಯಿಂದಲೂ ಅಪಾಯಕಾರಿ. ಆದ್ದರಿಂದ ವೃತ್ತಿಶಿಕ್ಷಣವೂ ಸೇರಿದಂತೆ ಪದವಿ ಮಟ್ಟದ ಎಲ್ಲಾ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕಲಿಕೆಯನ್ನು ಒಂದು ವಿಷಯವಾಗಿ ಯಾದರೂ ಕಡ್ಡಾಯಗೊಳಿಸಬೇಕೆಂದು ಸರ್ಕಾರವೇ ಎಲ್ಲ ವಿಶ್ವವಿದ್ಯಾಲಯಗಳಿಗೂ ಆದೇಶ ಹೊರಡಿಸಬೇಕು.

### ಶಿಫಾರಸು

**ವೃತ್ತಿ ಶಿಕ್ಷಣವೂ ಸೇರಿದಂತೆ ಯಾವುದೇ ಪದವಿ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಲೇಬೇಕೆಂದು ಎಲ್ಲ ವಿಶ್ವವಿದ್ಯಾಲಯಗಳಿಗೆ ಸರ್ಕಾರವೇ ಆದೇಶ ನೀಡಬೇಕು. ಯಾವುದೇ ಪದವಿಯ ವಿದ್ಯಾರ್ಥಿಯು ಕನ್ನಡ ಓದು-ಬರಹವನ್ನು ಕಲಿತಿರಲೇಬೇಕೆಂದು ಕಡ್ಡಾಯಗೊಳಿಸಬೇಕು. ವಿಶೇಷವಾಗಿ ವೃತ್ತಿ, ವೈದ್ಯಕೀಯ ಮತ್ತು ನಿರ್ವಹಣ ಪದವಿಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವ ಕೆಲಸವು ಆದ್ಯತೆಯ ಮೇಲೆ ಆರಂಭವಾಗಬೇಕು.**

# ೩.೨
# ಐಚ್ಛಿಕ ವಿಷಯವಾಗಿ ಕನ್ನಡ ಕಡ್ಡಾಯಗೊಳಿಸುವುದು

**ಈ**ಚಿನ ವರ್ಷಗಳಲ್ಲಿ ಪದವಿ ತರಗತಿಗಳಲ್ಲಿ ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವಾಗಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಈ ವಿದ್ಯಮಾನವು ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯ ಅಧ್ಯಯನಕ್ಕೆ ತೀವ್ರ ಹಿನ್ನಡೆಯನ್ನುಂಟುಮಾಡಿದೆ. ಕನ್ನಡ ಸಾಹಿತ್ಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕರ ವಾತಾವರಣವನ್ನುಂಟುಮಾಡುವ ಮೂಲಕ ಮತ್ತು ಕನ್ನಡ ಐಚ್ಛಿಕ ವಿಷಯದ ಅಧ್ಯಯನವನ್ನು ತೆರೆಯುವ ಸರ್ಕಾರಿ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಅನುದಾನವನ್ನು ನೀಡುವ ಮೂಲಕ ಮತ್ತು ಪೂರ್ಣಾವಧಿ ಅಧ್ಯಾಪಕರನ್ನು ನೇಮಕ ಮಾಡುವ ಮೂಲಕ ಸರ್ಕಾರವು ಈ ವಿಷಯದಲ್ಲಿ ವಿಶೇಷ ನೆರವು ನೀಡಬೇಕು. ಇಲ್ಲವಾದಲ್ಲಿ ಕನ್ನಡ ಸಾಹಿತ್ಯದ ಅಧ್ಯಯನವು ನರಳಬೇಕಾಗುತ್ತದೆ.

### ಶಿಫಾರಸುಗಳು

**೧. ಪದವಿ ತರಗತಿಗಳಲ್ಲಿ ಕನ್ನಡ ಐಚ್ಛಿಕ ವಿಷಯವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಬಹುಮಾನ ಅಥವಾ ವಿದ್ಯಾರ್ಥಿ ವೇತನವನ್ನು ನೀಡಬೇಕು. ಶುಲ್ಕದಲ್ಲಿ ರಿಯಾಯಿತಿ ಕೊಡಬೇಕು. ಸರ್ಕಾರಿ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಪೂರ್ಣಾವಧಿ/ಅನುದಾನಿತ ಉಪನ್ಯಾಸಕರನ್ನು ನೇಮಕ ಮಾಡಬೇಕು.**

**೨. ಎಲ್ಲ ಕಾಲೇಜುಗಳಲ್ಲಿ ಕನ್ನಡ ಐಚ್ಛಿಕ ವಿಷಯ ಕಡ್ಡಾಯಗೊಳಿಸುವ ಮೂಲಕ ವಿದ್ಯಾರ್ಥಿಗಳು ಕನ್ನಡ ಭಾಷಾ ಪ್ರೌಢಿಮೆ ಬೆಳೆಸಿಕೊಳ್ಳುವುದಕ್ಕೆ ಸರ್ಕಾರ ನಿರ್ದಿಷ್ಟ ಕ್ರಮ ಜರುಗಿಸಬೇಕು.**

# ೪
# ನ್ಯಾಯಾಂಗದಲ್ಲಿ ಕನ್ನಡ

**ಕ**ರ್ನಾಟಕದಲ್ಲಿ ಕನ್ನಡವು ಆಡಳಿತ ಭಾಷೆಯಾದ ಬೆನ್ನಲ್ಲಿಯೇ ಕರ್ನಾಟಕದ ನ್ಯಾಯಾಂಗವನ್ನು ಸಂಪೂರ್ಣ ಕನ್ನಡಮಯವಾಗಿಸುವ ಪ್ರಯತ್ನವೂ ಆಗುತ್ತಿದೆ. ಕರ್ನಾಟಕದ ನ್ಯಾಯಾಂಗವನ್ನು ಸಂಪೂರ್ಣವಾಗಿ ಕನ್ನಡಮಯವಾಗಲು ಇನ್ನೂ ಅನೇಕ ತೊಡಕುಗಳಿವೆ. ಆದರೂ ತಮ್ಮ ಅಳವಿನಲ್ಲಿ ಅನೇಕ ನ್ಯಾಯಮೂರ್ತಿಗಳು ಸಂಪೂರ್ಣ ಕನ್ನಡದಲ್ಲಿಯೇ ತೀರ್ಪನ್ನು ನೀಡುತ್ತಾ ಇದ್ದಾರೆ. ಇಂತಹ ಕನ್ನಡ ಪ್ರೀತಿಯನ್ನು ತೋರಿದ ನ್ಯಾಯಮೂರ್ತಿಗಳನ್ನು ಗುರುತಿಸಿ, ಗೌರವಿಸುವ ಮೂಲಕ ಇನ್ನಿತರ ನ್ಯಾಯಮೂರ್ತಿಗಳನ್ನೂ ಕನ್ನಡದಲ್ಲಿ ತೀರ್ಪು ನೀಡುವಂತೆ ಪ್ರೇರೇಪಿಸುವ ಪ್ರಯತ್ನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಿದೆ. ಇದಕ್ಕಾಗಿ ೨೦೦೮ರಲ್ಲಿ ೫೪ ನ್ಯಾಯಮೂರ್ತಿಗಳು ಮತ್ತು ೨೦೧೦ರಲ್ಲಿ ೬೬ ನ್ಯಾಯಮೂರ್ತಿಗಳನ್ನು ಗುರುತಿಸಿ ಗೌರವಿಸಲಾಗಿದೆ.

### ಶಿಫಾರಸುಗಳು

**೧. ಕರ್ನಾಟಕ ಸರ್ಕಾರವು ಕನ್ನಡದಲ್ಲಿಯೇ ಸಂಪೂರ್ಣ ಆಡಳಿತವು ನಡೆಯುತ್ತದೆ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ನ್ಯಾಯಾಂಗವೂ ಸಹ ಸಂಪೂರ್ಣವಾಗಿ ಕನ್ನಡಮಯ ವಾಗುವಂತೆ ಆದೇಶವನ್ನು ಹೊರಡಿಸಬೇಕು.**

**೨. ಕಾನೂನು ಕುರಿತ ಎಲ್ಲಾ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸುವ ಪ್ರಕ್ರಿಯೆಗೆ ಕೂಡಲೇ ಚಾಲನೆ ನೀಡಬೇಕು. ಇದಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕಾಗಲಿ ಅಥವಾ ಕನ್ನಡ ಭಾಷಾಭಾರತಿಗಾಗಲಿ ಜವಾಬ್ದಾರಿ ನೀಡಿ ಕರ್ನಾಟಕ ಸರ್ಕಾರವು ಆದೇಶ ಹೊರಡಿಸಬೇಕು.**

**೩. ಈಗ ಕಾನೂನು ರಚನೆಯು ಮೊದಲು ಆಂಗ್ಲ ಭಾಷೆಯಲ್ಲಿ ಆಗುತ್ತದೆ. ಅನಂತರ ಕನ್ನಡಕ್ಕೆ ಅನುವಾದ ಆಗುತ್ತಿದೆ. ಮೂಲದಲ್ಲಿಯೇ ಇದನ್ನು ಕನ್ನಡದಲ್ಲಿ ತಯಾರಾಗುವಂತೆ ಆದೇಶ ಹೊರಡಿಸಬೇಕು. ಇದಕ್ಕೆ ಸಂಬಂಧಿಸಿದಂತೆ ಕಾನೂನು ಇಲಾಖೆಗೆ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಇಲಾಖೆಗಳಿಗೆ ಸರ್ಕಾರವು ಸೂಕ್ತ ಸೂಚನೆ ನೀಡಬೇಕು.** ೦

# ೫.೧
# ಗಣಕದಲ್ಲಿ ಕನ್ನಡದ ಏಕೀಕರಣ

**ಕ**ನ್ನಡವನ್ನು ಗಣಕದಲ್ಲಿ ಕಾಣಿಸುವಂತೆ ಮಾಡಲು, ಆಡಳಿತವನ್ನು ಗಣಕೀಕರಣ ಗೊಳಿಸಲು ಅನೇಕ ಪ್ರಯತ್ನಗಳು ಕಳೆದ ಹಲವು ದಶಕಗಳಿಂದ ಆಗುತ್ತಲೇ ಇವೆ. ಆದರೆ ಗಣಕದಲ್ಲಿ ಕನ್ನಡದ ಏಕೀಕರಣ ಇನ್ನೂ ಸಂಪೂರ್ಣವಾಗಿ ಆಗಿಲ್ಲ. ಒಂದು ಗಣಕ ಯಂತ್ರದಲ್ಲಿ ಬರೆದ ಕನ್ನಡವು ಮತ್ತೊಂದು ಗಣಕಯಂತ್ರದಲ್ಲಿ ಮೂಲದಂತೆಯೇ ಕಾಣುವುದಿಲ್ಲ. ಇದಕ್ಕೆ ಆಯಾ ಗಣಕಯಂತ್ರ ಬಳಸುವ ಭಾಷೆ (ಆಪರೇಟಿಂಗ್ ಸಿಸ್ಟಮ್) ಕಾರಣವಾಗಿರುತ್ತದೆ. ಇದನ್ನು ಸರಿಪಡಿಸಲು ಕನ್ನಡ ವಿಶ್ವವಿದ್ಯಾಲಯವೂ ಒಳಗೊಂಡಂತೆ ಅನೇಕ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಅನೇಕಾನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಚಿದಾನಂದಗೌಡರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯು ನೀಡಿರುವ ವರದಿಯೂ ಕರ್ನಾಟಕ ಸರ್ಕಾರದ ಮುಂದಿದೆ. ಆದರೆ ಈ ಕೆಲಸಗಳು ಕ್ಷಿಪ್ರಗತಿಯಲ್ಲಿ ಆಗಬೇಕಾದುದು ಇಂದಿನ ತುರ್ತು ಅಗತ್ಯ. ನಮ್ಮ ಮುಂದಿನ ತಲೆಮಾರು ಸಂಪೂರ್ಣವಾಗಿ ಗಣಕಲೋಕದಲ್ಲಿ ಬದುಕುತ್ತಾ ಇರುವುದರಿಂದ ಕನ್ನಡವನ್ನು ಭಾಷೆಯಾಗಿ ಉಳಿಸಲು ಗಣಕಲೋಕದಲ್ಲಿ ಕನ್ನಡದ ಏಕೀಕರಣ ಆಗಬೇಕಾದುದು ಕರ್ನಾಟಕ ಸರ್ಕಾರದ ಪ್ರಥಮ ಆದ್ಯತೆಯ ಕೆಲಸ ಆಗಬೇಕಿದೆ.

### ಶಿಫಾರಸುಗಳು

೧. **ಸದ್ಯಕ್ಕೆ ಕರ್ನಾಟಕ ಸರ್ಕಾರವು 'ವಿಂಡೋಸ್' ಎಂಬ ಆಪರೇಟಿಂಗ್ ಸಿಸ್ಟಂ ಬಳಸುತ್ತಿದೆ. ಈ ವಿಂಡೋಸ್ ಸಂಸ್ಥೆಯು ಪ್ರತೀ ಎರಡು ವರ್ಷಗಳಿಗೂ ತನ್ನ ಆಪರೇಟಿಂಗ್ ಸಿಸ್ಟಂಗೆ ಹೊಸದನ್ನು ಸೇರಿಸುತ್ತಿದೆ. ಹೀಗಾಗಿ ಮೂರು ವರ್ಷಗಳಿಗೆ ಒಮ್ಮೆ ಸರ್ಕಾರದ ಎಲ್ಲಾ ಇಲಾಖೆಗಳ ಎಲ್ಲಾ ಗಣಕಗಳಿಗಾಗಿ ಮತ್ತೆ ಹೊಸದನ್ನು ಕೊಳ್ಳಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ. ಇದನ್ನು ಸರಿಪಡಿಸಲು ಉತ್ತರಪ್ರದೇಶ ಹಾಗೂ ತಮಿಳುನಾಡು ಸರ್ಕಾರಗಳು ಅದಾಗಲೇ ಜಾರಿಗೆ ತಂದಿರುವಂತೆ ಲೀನಕ್ಸ್ ಎಂಬ ಉಚಿತ ಆಪರೇಟಿಂಗ್ ಸಿಸ್ಟಂ ಅನ್ನು ಸರ್ಕಾರದ ಆಡಳಿತ ಯಂತ್ರದ ಎಲ್ಲ ಹಂತದಲ್ಲೂ ಜಾರಿಗೊಳಿಸಬೇಕು. ಈ**

ತಂತ್ರಾಂಶವು ಉಚಿತವಾಗಿ ದೊರೆಯುವಂತಹದು ಮತ್ತು ಕಾಲ ಕಾಲಕ್ಕೆ ಈ ತಂತ್ರಾಂಶದಲ್ಲಿ ಆಗುವ ಬದಲಾವಣೆಗಳನ್ನು ಪುಕ್ಕಟೆಯಾಗಿ ಅಂತರ್ಜಾಲದಿಂದ ಪಡೆಯಬಹುದು. ಹೀಗಾಗಿ ಗಣಕಯಂತ್ರ ನಡೆಸಲು ಬಳಸುವ ತಂತ್ರಾಂಶವನ್ನು ಕೊಳ್ಳುವುದಕ್ಕೆ ಕಾಲಕಾಲಕ್ಕೆ ಸರ್ಕಾರವು ಮಾಡುತ್ತಿರುವ ಖರ್ಚನ್ನು ತಪ್ಪಿಸಬಹುದು.

೨. ಕನ್ನಡ ಭಾಷೆಯನ್ನು ಗಣಕದಲ್ಲಿ ಬಳಸುವಂತೆ ಮಾಡಲು ಅನೇಕ ವ್ಯಕ್ತಿಗಳು, ಸಂಸ್ಥೆಗಳು ದಶಕಗಳಿಂದ ಸೇವೆ ಸಲ್ಲಿಸಿದ್ದಾರೆ. ಗಣಕಕ್ಕಾಗಿ ಕನ್ನಡ ಬಳಸಲು ಮೊದಲ ಕೀಬೋರ್ಡ್ ರೂಪಿಸಿದ ಕೆ.ಪಿ.ರಾವ್ ಅವರಿಂದ ಹಿಡಿದು, ಪ್ರಕಾಶಕ್, ಶ್ರೀಲಿಪಿ, ಆಕೃತಿ ಮುಂತಾದ ಅನೇಕ ಸಂಸ್ಥೆಗಳು ಸಹ ಕನ್ನಡ ಲಿಪಿಯನ್ನು ಆಸ್ಕಿ ಕೋಡ್‌ನಲ್ಲಿ ತಯಾರಿಸಿ ಮಾರುಕಟ್ಟೆಗೆ ನೀಡಿವೆ. 'ಬರಹ' ಎಂಬ ಉಚಿತ ತಂತ್ರಾಂಶವನ್ನು ತಯಾರಿಸಿ ಅದನ್ನು ಅಂತರ್ಜಾಲದ ಮೂಲಕ ಕನ್ನಡ ಜಗತ್ತಿನಲ್ಲಿ ಬಳಕೆಗೆ ತಂದವರೂ ಇದ್ದಾರೆ. ಇದೇ ತಂತ್ರಾಂಶ ಬಳಕೆಗೆ ಈಗ ಹಣ ನೀಡಬೇಕಾಗಿರುವುದನ್ನು ಸರ್ಕಾರ ಗಮನಿಸಬೇಕು. ಇದಲ್ಲದೆ ಕನ್ನಡ ಗಣಕ ಪರಿಷತ್ತು ಸಹ ನುಡಿ ಎಂಬ ತಂತ್ರಾಂಶ ತಯಾರಿಸಿ, ಅದಕ್ಕೆ ಸರ್ಕಾರಿ ಮಾನ್ಯತೆಯೂ ದೊರೆತು ಬಳಸಲಾಗುತ್ತಿದೆ. ಆದರೆ ಈ ಎಲ್ಲಾ ತಂತ್ರಾಂಶಗಳನ್ನು ಬಳಸಿ ಸೃಷ್ಟಿಸಿದ ದಾಖಲೆಗಳು ಎಲ್ಲಾ ಗಣಕಗಳಲ್ಲಿಯೂ ಮೂಲಸ್ವರೂಪದಂತೆಯೇ ತೆರೆದುಕೊಳ್ಳುವುದಿಲ್ಲ. ಇದನ್ನು ಸರಿಪಡಿಸಲು 'ಕಾಮನ್ ಪ್ಲಾಟ್‌ಫಾರಂ ಕನ್‌ವರ್ಷನ್ ಎಂಜಿನ್' ಎಂದು ಕರೆಯಲಾಗುವ, ಯಾವುದೇ ತಂತ್ರಾಂಶ ಆಧರಿತ ಗಣಕದಲ್ಲಿ ಕನ್ನಡವು ಮೂಲಸ್ವರೂಪದಂತೆಯೇ ಕಾಣಿಸುವ ಹಾಗೆ ನುಡಿ ತಂತ್ರಾಂಶದ ಜೊತೆಯೇ ಕೊಡುವ ಹಾಗೆ ಆಗಬೇಕು. ಆ ಮೂಲಕ ವಿಂಡೋಸ್, ಮ್ಯಾಕ್, ಲೀನಕ್ಸ್ ಮತ್ತು ಸೋಲಾರೆಕ್ಸ್ ಇತ್ಯಾದಿ ಆಪರೇಟಿಂಗ್ ಸಿಸ್ಟಂಗಳಲ್ಲಿ ಕನ್ನಡವು ಕಾಣುವಂತಹ ವ್ಯವಸ್ಥೆ ತುರ್ತಾಗಿ ಆಗಬೇಕು. ಕಾಮನ್ ಪ್ಲಾಟ್‌ಫಾರಂ ಆಪರೇಟಿಂಗ್ ಸಿಸ್ಟಂ ಕನ್ವರ್ಷನ್ ಎಂಜಿನ್ ತಯಾರಿಕೆಯು ಗಣಕದಲ್ಲಿ ಕನ್ನಡದ ಏಕೀಕರಣವನ್ನು ಸಾಧಿಸಲು ಆದ್ಯತೆಯ ಮೇಲೆ ಆಗಬೇಕಾದ ಕೆಲಸವಾಗಿದೆ.

೩. ಯೂನಿಕೋಡ್ ಎಂಬ ಭಾಷೆಯ ಬಳಕೆಯ ಮೂಲಕ ಕನ್ನಡವು ಎಲ್ಲಾ ಗಣಕದಲ್ಲಿಯೂ ಮೂಡುವುದು ಸುಲಭವಾಗಿದೆ. ಆದರೆ ಈ ಯೂನಿಕೋಡ್‌ಗಾಗಿ ಕನ್ನಡವನ್ನು ಬಳಸುವುದಕ್ಕೆ ಇರುವ ಅಕ್ಷರ ಮಾದರಿಗಳ/ ಶೈಲಿಗಳ ಸಂಖ್ಯೆ ಕಡಿಮೆ ಇದೆ. ಗಣಕದಲ್ಲಿ ಕನ್ನಡವನ್ನು ಬರೆಯಲು ಇರುವ ಎಲ್ಲಾ ಅಕ್ಷರ ಶೈಲಿಗಳನ್ನು ಯೂನಿಕೋಡ್‌ನಲ್ಲಿಯೂ ಬಳಸುವಂತೆ ಆಗಬೇಕು. ಇದಕ್ಕೆ ನಮ್ಮಲ್ಲಿರುವ ಎಲ್ಲಾ ಅಕ್ಷರ ಶೈಲಿಗಳನ್ನೂ ಯೂನಿಕೋಡ್‌ಗೆ ಬದಲಿಸಲು ಬೇಕಾದ ಕೋ-ಡಿಫಿಕೇಷನ್ ಕೆಲಸವನ್ನು, ಯುದ್ಧದೋಪಾದಿಯಲ್ಲಿ ಸಿದ್ಧಪಡಿಸಲು ಬೇಕಾದ ಕಾರ್ಯಪಡೆಯನ್ನು ನಿಗದಿಗೊಳಿಸಬೇಕು.

೪. ಯೂನಿಕೋಡ್‌ನಲ್ಲಿ ಕನ್ನಡವನ್ನು ಬಳಸುವಲ್ಲಿ ಇರುವ ಸಮಸ್ಯೆಗಳನ್ನು ಕಾಲ ಕಾಲಕ್ಕೆ ಸರಿಪಡಿಸಲು ಕರ್ನಾಟಕ ಸರ್ಕಾರವು ಯೂನಿಕೋಡ್ ಕನ್‌ಸಾರ್ಟಿಯಮ್‌ಗೆ ಸದಸ್ಯತ್ವ ಪಡೆದ ಸರ್ಕಾರದ ಅಂಗಸಂಸ್ಥೆಗೆ ತಿಳಿಸಬೇಕು. ಯೂನಿಕೋಡ್ ಬಳಕೆಗೆ ಬೇಕಾದ ಹೆಚ್ಚುವರಿ ಮಾಹಿತಿಯನ್ನು ಅದಾಗಲೇ ಈ ಕೆಲಸ ಮಾಡುತ್ತಿರುವ ಕನ್ನಡ ಗಣಕ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಥವಾ ಕನ್ನಡ ಅಭಿವೃದ್ಧಿ ಪ್ರಾಧಿಕಾರದಂತಹ ಸಂಸ್ಥೆಗಳಿಗೆ ಯೂನಿಕೋಡ್ ಕನ್‌ಸಾರ್ಟಿಯಂನಲ್ಲಿ ಕರ್ನಾಟಕ ಸರ್ಕಾರದ ಪ್ರತಿನಿಧಿಯಾಗಲು ತಿಳಿಸಬೇಕು.

೫. ಕರ್ನಾಟಕ ಸರ್ಕಾರದ ಈ-ಆಡಳಿತದಲ್ಲಿ ಯೂನಿಕೋಡನ್ನೇ ಪ್ರಧಾನ ಭಾಷೆಯಾಗಿ ಬಳಸಲು ಆದೇಶವನ್ನು ಹೊರಡಿಸಬೇಕು. ಇದರಿಂದ ಅಂತರ್ಜಾಲದಲ್ಲಿ ಕನ್ನಡದ ಏಕೀಕರಣ ಸಾಧಿಸುವುದು ಸುಲಭವಾಗುತ್ತದೆ.

❍

# ೫.೨
# ಸಂಚಾರಿ ದೂರವಾಣಿಯಲ್ಲಿ ಕನ್ನಡ

**'ಮೊ**ಬೈಲ್ ಫೋನ್' ಎಂದು ಕರೆಸಿಕೊಳ್ಳುವ ಸಂಚಾರಿ ದೂರವಾಣಿಗಳಲ್ಲಿ ಕನ್ನಡವನ್ನು ಬಳಕೆಗೆ ತರುವ ಪ್ರಯತ್ನ ಸಣ್ಣಮಟ್ಟದಲ್ಲಿ ಆಗಿದೆ. ಇದು ಪೂರ್ಣ ಪ್ರಮಾಣದಲ್ಲಿ ಆಗಬೇಕು. ಎಲ್ಲಾ ಸಂಚಾರಿ ದೂರವಾಣಿಗಳಲ್ಲಿ ಕನ್ನಡವನ್ನು ಬಳಕೆಗೆ ತರುವುದನ್ನು ಸರ್ಕಾರವು ಕಡ್ಡಾಯಗೊಳಿಸಬೇಕು.

**ಶಿಫಾರಸುಗಳು**

**೧. ಸಂಚಾರಿ ದೂರವಾಣಿಯಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸಲನುವಾಗುವಂತಹ ತಂತ್ರಾಂಶಗಳನ್ನು ಅಳವಡಿಸಲು ಎಲ್ಲಾ ಸಂಚಾರಿ ದೂರವಾಣಿ ತಯಾರಿಕಾ ಸಂಸ್ಥೆಗಳಿಗೆ ಮತ್ತು ಸಂಚಾರಿ ದೂರವಾಣಿ ಸೇವೆಯನ್ನು ಒದಗಿಸುತ್ತಿರುವ ಸಂಸ್ಥೆಗಳಿಗೆ ಸರ್ಕಾರವು ಆದೇಶ ನೀಡಬೇಕು.**

**೨. ಇದಕ್ಕೆ ಅಗತ್ಯವಾದ ತಂತ್ರಾಂಶಗಳ ತಯಾರಿಕೆಗೆ ಕೂಡಲೇ ಕಾರ್ಯಪ್ರವೃತ್ತರಾಗಲು ಕಾರ್ಯಪಡೆಯನ್ನು ನಿಯೋಜಿಸಬೇಕು.**

**೩. ಸಂಚಾರಿ ದೂರವಾಣಿ ತಯಾರಿಸುವ ಎಲ್ಲಾ ಸಂಸ್ಥೆಗಳ ಮುಖ್ಯಸ್ಥರ ಹಾಗೂ ಸೇವೆಯನ್ನು ಒದಗಿಸುತ್ತಿರುವ ಸಂಸ್ಥೆಗಳ ಮುಖ್ಯಸ್ಥರ ಹಾಗೂ ಕನ್ನಡ ತಂತ್ರಾಂಶ ತಯಾರಕರ ಜಂಟಿಸಭೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಾತಿನಿಧ್ಯದೊಡನೆ ಕರೆದು ಈ ಎಲ್ಲಾ ಅಗತ್ಯಗಳನ್ನೂ ಚರ್ಚಿಸಿ, ಕಾಲಮಿತಿಯೊಳಗೆ ಸಂಚಾರಿ ದೂರವಾಣಿಯಲ್ಲಿ ಕನ್ನಡವು ಶಾಶ್ವತಗೊಳ್ಳುವಂತೆ ಆದೇಶ ನೀಡಬೇಕು.**

❍

# ೬.೧
# ಕನ್ನಡ ಭವನಗಳ ನಿರ್ಮಾಣ

**ಕ**ನ್ನಡ ನಾಡಿನ ರಾಜಧಾನಿಯಾದ ಬೆಂಗಳೂರು ಮಹಾನಗರವೂ ಸೇರಿದಂತೆ ಅನೇಕ ಭಾಗಗಳಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರಾಗುವಂಥ ಬೆಳವಣಿಗೆಗಳು ನಡೆಯುತ್ತಿವೆ. ಆಂಗ್ಲ ಮಾಧ್ಯಮ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸದಿದ್ದರೆ ಉದ್ಯೋಗಭದ್ರತೆಯ ಸಮಸ್ಯೆ ಇದೆ ಎಂಬ ಭಾವನೆ ಬಹಳಷ್ಟು ಪಾಲಕ ವರ್ಗದಲ್ಲಿ ಮೂಡಿದೆ. ಪಾಶ್ಚಾತ್ಯ ಭಾಷೆ – ಸಂಸ್ಕೃತಿಗಳ ವೈಭವೀಕರಣ ದೃಶ್ಯಮಾಧ್ಯಮಗಳಲ್ಲಿ ಹೆಚ್ಚಾಗಿದೆ. ಇದರಿಂದ ಕನ್ನಡ ಸಂಸ್ಕೃತಿಯ ಮೂಲ ಬೇರುಗಳಿಗೆ ಅಪಾಯ ಉಂಟಾಗುವ ವಾತಾವರಣ ಉಂಟಾಗಿದೆ. ಸರಕುಸಂಸ್ಕೃತಿಯ ಬೆನ್ನುಬಿದ್ದ ಅನೇಕ ಕಾರ್ಯಕ್ರಮಗಳು "ಕನ್ನಡತನ"ದ ಮೇಲೆ ಆಕ್ರಮಣ ನಡೆಸುವ ಪ್ರಯತ್ನದಲ್ಲಿವೆ. ಈ ಎಲ್ಲ ಬೆಳವಣಿಗೆಗಳು ನಾಡು ನುಡಿಯ ಭವಿಷ್ಯಕ್ಕೆ ಸವಾಲಾಗಿವೆ. ಈ ಸವಾಲುಗಳನ್ನು ಎದುರಿಸುವ ಅಗತ್ಯವೂ ಕೂಡ ಅಷ್ಟೇ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಉದ್ದಗಲಕ್ಕೂ ನಿತ್ಯ–ನಿರಂತರ ಕನ್ನಡಪರ ಚಟುವಟಿಕೆಗಳು ನಡೆಯುತ್ತಲೇ ಇರಬೇಕಾದ ಅಗತ್ಯವನ್ನು ಪ್ರಾಧಿಕಾರವು ಮನಗಂಡಿದೆ. ಇದನ್ನು ಸಾಧ್ಯ ಮಾಡುವುದಕ್ಕೆ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ ಕನ್ನಡ ಕಾರ್ಯಕರ್ತರನ್ನು ಒಂದೆಡೆಗೆ ತರುವಂಥ 'ಕನ್ನಡ ಭವನ'ಗಳ ಅವಶ್ಯಕತೆ ಬಹಳಷ್ಟಿದೆ. ಈ ಭವನ ನೂರರಿಂದ ಎರಡುನೂರು ಜನರು ಕುಳಿತುಕೊಳ್ಳಲು ಸಾಧ್ಯವಾಗುವಂಥ ಪುಟ್ಟ ಸಭಾಂಗಣವನ್ನು ಹೊಂದಿರಬೇಕು, ಒಂದು ಪುಟ್ಟ ವಾಚನಾಲಯ, ಪುಟ್ಟ ಕಾರ್ಯಾಲಯ ಮತ್ತು ಶೌಚಾಲಯಗಳು ಕಡ್ಡಾಯವಾಗಿರುವಂತೆ ನೋಡಿಕೊಳ್ಳಬೇಕು, ಸರ್ಕಾರವೇ ಪ್ರತಿ ತಾಲ್ಲೂಕಿನಲ್ಲೂ ಸೂಕ್ತವಾದ ನಿವೇಶನವನ್ನೂ ಗುರುತಿಸಬೇಕು ಮತ್ತು ತನ್ನ ಖರ್ಚಿನಲ್ಲೇ ಕಾಲಮಿತಿಯೊಳಗೆ ರಾಜ್ಯದ ೧೭೫ ತಾಲ್ಲೂಕುಗಳಲ್ಲೂ ಕಟ್ಟಡಗಳು ಏಳುವಂತೆ ನೋಡಿಕೊಳ್ಳಬೇಕು. ಕನಿಷ್ಠ ಪಕ್ಷ ವಾರಕ್ಕೊಮ್ಮೆಯಾದರೂ ಆಯಾ ತಾಲ್ಲೂಕಿನ ಕನ್ನಡ ಕಾರ್ಯಕರ್ತರು ಸೇರಿ ಚರ್ಚೆ, ಗೋಷ್ಠಿ, ಕಮ್ಮಟ, ಸಾಂಸ್ಕೃತಿಕ ಚಟುವಟಿಕೆಗಳು ನಡೆಸುವಂಥ ವಾತಾವರಣಕ್ಕೆ ಈ ಭವನವು ಖಂಡಿತವಾಗಿಯೂ ತಾನಾಗಿಯೇ ಪ್ರೇರಣೆಯನ್ನು ಒದಗಿಸಬಲ್ಲದು.

## ಶಿಫಾರಸು

ರಾಜ್ಯದ ೫೨ ಗಡಿ ತಾಲ್ಲೂಕುಗಳಲ್ಲಿ ಸರಕಾರವು ತಾನೇ ಮುಂದಾಗಿ ಕನ್ನಡ ಭವನ ನಿರ್ಮಿಸಬೇಕು. ಸೂಕ್ತ ನಿವೇಶನವನ್ನೂ ಕೂಡ ಸರ್ಕಾರವೇ ಒದಗಿಸಬೇಕು. ಈ ಭವನದಲ್ಲಿ ಎಲ್ಲ ಕನ್ನಡಪರ ಚಟುವಟಿಕೆಗಳಿಗೆ ಬಾಡಿಗೆ ಪಡೆಯದಂತೆ ನಿಯಮ ಮಾಡಬೇಕು. ಈಗಾಗಲೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ/ಹಣ ಸಹಾಯ ಮಾಡಿರುವ ಕನ್ನಡ ಭವನಗಳಿರುವಲ್ಲಿ ಮತ್ತೆ ಕಟ್ಟಬೇಕಾಗಿಲ್ಲ.

# ೬.೨
# ಕನ್ನಡೇತರರಿಗೆ ಕನ್ನಡ ಕಲಿಕಾ ಕೇಂದ್ರಗಳನ್ನು ಆರಂಭಿಸುವ ಬಗ್ಗೆ

**ಜಾ**ಗತೀಕರಣ ಮತ್ತು ಉದಾರೀಕರಣದ ಈ ಯುಗದಲ್ಲಿ ಬದುಕು ಕಟ್ಟಲೆಂದು ನಗರಗಳಿಗೆ ವಲಸೆ ಬರುವ ಪರಭಾಷಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಇದೆ. ಕರ್ನಾಟಕದಲ್ಲಿಯಂತೂ ಕಳೆದ ಹತ್ತು ವರ್ಷಗಳಿಂದ, ಅಂದರೆ ಐಟಿ–ಬಿಟಿಯ ಉಚ್ಛ್ರಾಯ ಕಾಲದಿಂದ ವಲಸೆ ಬರುತ್ತಿರುವ ಪರಭಾಷಿಕರ ಸಂಖ್ಯೆ ದ್ವಿಗುಣಗೊಂಡಿದೆ. ಬೆಂಗಳೂರಿನಂತಹ ಮಹಾನಗರಿಯಲ್ಲಂತೂ ಪರಭಾಷಿಕರೇ ಬಹುಸಂಖ್ಯಾತರು. ಭಾರತವು ಒಕ್ಕೂಟ ವ್ಯವಸ್ಥೆಯ ಗಣರಾಜ್ಯ. ಇಲ್ಲಿ ಯಾವುದೇ ಭಾಷಿಕ ಎಲ್ಲಿಯಾದರೂ ಇದ್ದು ತನ್ನ ಬದುಕು, ವೃತ್ತಿಯನ್ನು ರೂಪಿಸಿಕೊಳ್ಳಬಹುದು. ಅದನ್ನು ವಿರೋಧಿಸುವ ಅಗತ್ಯವಿಲ್ಲ. ಆದರೆ ಹೀಗೆ ಕರ್ನಾಟಕಕ್ಕೆ ವಲಸೆ ಬಂದು ನೆಲೆಸಿದ ಜನ ನಿಗದಿತ ಅವಧಿಯಲ್ಲಿ ಕನ್ನಡವನ್ನೂ ಕಲಿಯಬೇಕು. ಅದಾಗದೆ ಹೋದರೆ ಕನ್ನಡವನ್ನು ಕಟ್ಟುವ ಕೆಲಸಕ್ಕೆ ಬಲ ದೊರೆಯುವುದಿಲ್ಲ.

### ಶಿಫಾರಸುಗಳು

**ಅ) ಕರ್ನಾಟಕದಲ್ಲಿ ನೆಲೆಸಿರುವ ಯಾವುದೇ ಭಾಷಿಕನೂ ಇಲ್ಲಿಯ ಮೂಲ ಸೌಕರ್ಯಗಳನ್ನೆಲ್ಲ ಅನುಭವಿಸುವನಾದುದರಿಂದ ಇಲ್ಲಿ ನೆಲೆಸಿದ ಒಂದು ವರ್ಷದ ಒಳಗೆ ಓದಿ–ಬರೆಯುವಷ್ಟು ಕನ್ನಡವನ್ನು ಕಲಿತಿರಲೇಬೇಕು ಎಂದು ಸರ್ಕಾರೀ ಆದೇಶ ಹೊರಡಿಸಬೇಕು.**

**ಆ) ಮಹಾನಗರಗಳಲ್ಲಿ ಪರಭಾಷಿಕರು ಹೆಚ್ಚಾಗಿ ಇರುವ ವಿಸ್ತರಣೆ/ಬಡಾವಣೆಗಳಲ್ಲಿ ಕನ್ನಡ ಸಂಸ್ಕೃತಿ ಕೇಂದ್ರವನ್ನು ಸ್ಥಾಪಿಸಿ, ಅಲ್ಲಿಯೇ ಅವರಿಗೆ ಕನ್ನಡ ಕಲಿಸುವ ಕೇಂದ್ರಗಳನ್ನೂ ಆರಂಭಿಸಬೇಕು. ಇದರಿಂದಾಗಿ ಪರಭಾಷಿಕರಿಗೆ ನಿರಂತರವಾಗಿ ಕನ್ನಡ ಕಲಿಸುವ ತಾಣವೂ ಸಿಗುತ್ತದೆ; ಅನೇಕ ಕನ್ನಡ ಕಲಿತ ಪದವೀಧರರಿಗೆ ಕೆಲಸವೂ ದೊರೆಯುತ್ತದೆ. ಬೆಂಗಳೂರು ಮಹಾನಗರಿಯಲ್ಲಿಯೇ ಇಂತಹ ಕನ್ನಡ ಸಂಸ್ಕೃತಿ ಕೇಂದ್ರಗಳನ್ನು ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲಿಯೂ ತುರ್ತಾಗಿ ಆರಂಭಿಸುವ ಅವಶ್ಯಕತೆ ಇದೆ.**

ಇ) ಯಾವುದೇ ಪರಭಾಷಿಕರು ಸರ್ಕಾರದ ಸೌಲಭ್ಯ ಮತ್ತು ಪರವಾನಗಿ ಪಡೆಯುವ ಹಂತದಲ್ಲಿ, ಆತನಲ್ಲಿ/ಆಕೆಯಲ್ಲಿ ಕನ್ನಡ ಕಲಿಕೆಯ ನಿಗದಿತ ಪ್ರಮಾಣಪತ್ರ ಇದ್ದರೆ ಮಾತ್ರ ಪರವಾನಗಿ ನೀಡುವಂತೆ ಸರ್ಕಾರವು ಆದೇಶ ಹೊರಡಿಸಬೇಕು.

ಈ) ಹೀಗೆ ಕನ್ನಡವನ್ನು ಕಲಿತ ಪರಿಭಾಷಿಕನು ಹೆಚ್ಚುವರಿ ಕನ್ನಡ ಕಲಿಯಲು ಅನುವಾಗುವಂತಹ ಪಠ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅದಾಗಲೇ ಬಳಕೆಯಲ್ಲಿರುವ ಕಾವ, ಜಾಣ, ರತ್ನ ಮಾದರಿಯಲ್ಲಿ ರೂಪಿಸಬಹುದು.

# ೬.೩
# ಕನ್ನಡ ಸಿನಿಮಾಗಳಿಗೆ ನೀಡುತ್ತಿರುವ ಸೌಲಭ್ಯಗಳು; ನೀಡುವಾಗ ಗಮನಿಸಬೇಕಾದ ಅಂಶಗಳು

**ಕ**ರ್ನಾಟಕ ಸರ್ಕಾರವು ಕನ್ನಡ ಚಿತ್ರರಂಗದ ಬೆಳವಣಿಗೆಗಾಗಿ ನೀಡುತ್ತಿರುವಷ್ಟು ಸವಲತ್ತನ್ನು ಈ ದೇಶದ ಮತ್ಯಾವ ರಾಜ್ಯವೂ ನೀಡುತ್ತಿಲ್ಲ ಎಂಬುದು ಮೆಚ್ಚತಕ್ಕ ಅಂಶ. ವಾರ್ಷಿಕ ೭೫ ಚಿತ್ರಗಳಿಗೆ ಸಹಾಯಧನ ನೀಡಬೇಕೆಂಬ ನಿಲುವು, ಎರಡು ಮಕ್ಕಳ ಚಿತ್ರ, ಎರಡು ಪೌರಾಣಿಕ, ಎರಡು ಚಾರಿತ್ರಿಕ ಚಿತ್ರಗಳಿಗೆ ತಲಾ ೨೫ ಲಕ್ಷ ಸಹಾಯಧನವಲ್ಲದೆ ರಾಷ್ಟ್ರಮಟ್ಟದ ಗೌರವ ಪಡೆದ ಸಿನಿಮಾಗಳಿಗೆ ಎಂದೇ ವಿಶೇಷ ಪ್ರೋತ್ಸಾಹಧನ ನೀಡುವ ತೀರ್ಮಾನಗಳು ಕನ್ನಡ ಚಿತ್ರರಂಗಕ್ಕೆ ಹೊಸ ಜೀವವನ್ನು ತಂದುಕೊಟ್ಟಿದೆ.

ಆದರೆ ಹೀಗೆ ಸರ್ಕಾರದ ಸೌಲಭ್ಯಗಳನ್ನು ಪಡೆಯುವ ಸಿನಿಮಾಗಳ ಗುಣಮಟ್ಟದಲ್ಲಿ ಸಾಕಷ್ಟು ಕುಸಿತ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಸೌಲಭ್ಯ ಪಡೆಯುವ ಸಿನಿಮಾಗಳನ್ನು ಆರಿಸುವಾಗ ಕರ್ನಾಟಕ ಸರ್ಕಾರವು ಹೆಚ್ಚು ಎಚ್ಚರ ವಹಿಸಬೇಕಾಗಿದೆ.

## ಶಿಫಾರಸುಗಳು

೧. **ಸರ್ಕಾರದ ಸೌಲಭ್ಯ ಪಡೆಯುವ ಯಾವುದೇ ಕನ್ನಡ ಚಿತ್ರವು ಕನ್ನಡದ್ದೇ ಆದ ನೇರ ಚಿತ್ರವಾಗಿರಬೇಕು. ಯಾವುದೇ ಭಾಷೆಯ ಚಿತ್ರದಿಂದ ಸ್ಫೂರ್ತಿಯನ್ನಾಗಲೀ, ಯಾವುದೇ ದೃಶ್ಯಗಳನ್ನಾಗಲೀ, ಹಾಡನ್ನಾಗಲೀ ಬಳಸಿರಬಾರದು ಎಂಬ ಆದೇಶವನ್ನು ಕರ್ನಾಟಕದ ಚಲನಚಿತ್ರ ನೀತಿಯಲ್ಲಿ ಸೇರಿಸಬೇಕು.**

೨. **ಕರ್ನಾಟಕ ಸರ್ಕಾರದ ಸೌಲಭ್ಯ ಬಯಸುವ ಯಾವುದೇ ಸಿನಿಮಾದಲ್ಲಿ ಅಶ್ಲೀಲ ಎನಿಸುವ ಮಾತು, ಸನ್ನಿವೇಶಗಳು ಮತ್ತು ಹಿಂಸೆಯ ವೈಭವೀಕರಣ ಇರಬಾರದು ಎಂಬ ಆದೇಶವನ್ನು ಸರ್ಕಾರವು ಈ ಕೂಡಲೇ ಹೊರಡಿಸಬೇಕು.**

೩. **ಕನ್ನಡ ಚಿತ್ರರಂಗದ ಅಭಿವೃದ್ಧಿಗೆ ಪ್ರತೀ ಮಹಾನಗರದ ಬಡಾವಣೆಗಳಲ್ಲಿ ಕನ್ನಡ ಸಂಸ್ಕೃತಿ ಭವನ ಅಥವಾ ಕನ್ನಡ ಭವನವನ್ನು ಸ್ಥಾಪಿಸಬೇಕು. ಈ ಭವನದಲ್ಲಿ ಬಹೋಪಯೋಗಿ**

ಪ್ರದರ್ಶನ ಮಂದಿರದ ವ್ಯವಸ್ಥೆಯನ್ನು ಏರ್ಪಡಿಸಿ ಸದಭಿರುಚಿಯ ಚಲನಚಿತ್ರ ಚಳವಳಿಯನ್ನು ಪ್ರೋತ್ಸಾಹಿಸಲೆಂಬಂತೆ ರಾಷ್ಟ್ರೀಯ/ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ತೆರೆಕಂಡ ಹಾಗೂ ರಾಷ್ಟ್ರ ಪ್ರಶಸ್ತಿ ಪಡೆದ ಸಿನಿಮಾಗಳನ್ನು ಇಲ್ಲಿ ಪ್ರದರ್ಶಿಸುವಂತಹ ಆದೇಶವನ್ನು ಸರ್ಕಾರವು ಹೊರಡಿಸಬೇಕು.

೪. (ಅ) ಕನ್ನಡ ಚಿತ್ರರಂಗಕ್ಕೆ ನೀಡಿರುವಂತಹ ಸವಲತ್ತನ್ನು ಕನ್ನಡದ ದೂರದರ್ಶನ ಧಾರಾವಾಹಿಗಳಿಗೂ ವಿಸ್ತರಿಸಬೇಕು. ಈ ದೂರದರ್ಶನ ಉದ್ಯಮದಲ್ಲಿ ತೊಡಗಿಕೊಂಡವರನ್ನು ಗುರುತಿಸಿ, ಗೌರವಿಸುವ, ಪ್ರಶಸ್ತಿಗಳನ್ನು ನೀಡುವ ಕೆಲಸವನ್ನು ಕರ್ನಾಟಕ ಸರ್ಕಾರವು ಕೂಡಲೇ ಆರಂಭಿಸಬೇಕು.

(ಆ) ಕರ್ನಾಟಕ ಸರ್ಕಾರವು ದೂರದರ್ಶನ ಮತ್ತು ಉಪಗ್ರಹವಾಹಿನಿಗಳಲ್ಲಿ ಸೃಜನಶೀಲ ಚಟುವಟಿಕೆಯನ್ನು ಪ್ರೋತ್ಸಾಹಿಸಲು ರಾಜ್ಯ ಪ್ರಶಸ್ತಿಗಳನ್ನು ಕಲಾವಿದರಿಗೆ, ಆಯಾ ಕಾರ್ಯಕ್ರಮಗಳಿಗೆ ನೀಡುವಾಗ ಆ ಕಾರ್ಯಕ್ರಮವು ಪುನರವತರಣಿಕೆ ಅಥವಾ ಪರಭಾಷೆಯ ವಾಹಿನಿಗಳ ಕಾರ್ಯಕ್ರಮದಲ್ಲಿ ಪ್ರಸಾರವಾದ ಯಾವುದೇ ಕಾರ್ಯಕ್ರಮದ ಸ್ಫೂರ್ತಿ ಅಥವಾ ಪುನರವತಣಿಕೆ ಆಗಿರಬಾರದು ಎಂಬ ಷರತ್ತನ್ನು ವಿಧಿಸಿ ಕನ್ನಡದ ಜಗತ್ತಿನಲ್ಲಿ ನೇರವಾಗಿ ಸೃಜನಶೀಲ ಚಟುವಟಿಕೆ ಆಗುವುದನ್ನು ಪ್ರೋತ್ಸಾಹಿಸಬೇಕು.

○

ಗಡಿ ಕನ್ನಡ

## ೭.೧
## ನೆರೆರಾಜ್ಯಗಳ ಗಡಿಭಾಗಗಳಲ್ಲಿ ಇರುವ ಕನ್ನಡ ಸಂಘ-ಸಂಸ್ಥೆಗಳಿಗೆ ಆಯವ್ಯಯದಲ್ಲಿ ಹಣ ಮೀಸಲು

**ಹೊ**ರ ರಾಜ್ಯದಲ್ಲಿರುವ ಕನ್ನಡಿಗರ ಸಂಘ ಸಂಸ್ಥೆಗಳಿಗೆ ನೆರವಾಗುವಂತೆ ಕರ್ನಾಟಕ ಸರ್ಕಾರವು ಬಜೆಟ್‌ನಲ್ಲಿ ಪ್ರತ್ಯೇಕ ಹಣ ಮೀಸಲಿಟ್ಟಿಲ್ಲ. ಇದರಿಂದ ಹೊರನಾಡುಗಳಲ್ಲಿ ಇರುವ ಕನ್ನಡಿಗರ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹಿನ್ನಡೆಯಾಗುವ ಸಾಧ್ಯತೆ ಇದೆ. ಹಾಗಾಗದಂತೆ ನೋಡಿಕೊಳ್ಳಬೇಕಾದ ನೈತಿಕ ಹೊಣೆಗಾರಿಕೆಯು ಕರ್ನಾಟಕ ಸರ್ಕಾರದ್ದಾಗಿರುತ್ತದೆ.

**ಶಿಫಾರಸು**

**ಈ ವರ್ಷದ ತನ್ನ ಆಯವ್ಯಯದಲ್ಲಿ ಮಹಾರಾಷ್ಟ್ರ ಸರ್ಕಾರವು ಕರ್ನಾಟಕದ ಗಡಿ ಭಾಗಗಳಲ್ಲಿ ಇರುವ ಮರಾಠಿ ಸಂಘ–ಸಂಸ್ಥೆಗಳಿಗೆ ಮೂರು ಕೋಟಿ ರೂಪಾಯಿ ತೆಗೆದಿಟ್ಟ ಮಾಹಿತಿ ಇದೆ. ಕರ್ನಾಟಕ ಸರ್ಕಾರವು ಕೂಡಾ ತನ್ನ ಐದು ನೆರೆ ರಾಜ್ಯಗಳ ಗಡಿ ಭಾಗದ ಕನ್ನಡಿಗರ ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಯ–ವ್ಯಯದಲ್ಲಿ ಹಣವನ್ನು ಮೀಸಲಿಡಬೇಕು ಮತ್ತು ಈ ಪರಂಪರೆ ಮುಂಬರುವ ವರ್ಷಗಳಲ್ಲೂ ಮುಂದುವರೆಯಬೇಕು.**

೦

# ೭.೨
# ಗಡಿ ತಾಲ್ಲೂಕುಗಳ ಅಭಿವೃದ್ಧಿಗೆ ವಿಶೇಷ ಯೋಜನೆ

**ಕ**ರ್ನಾಟಕ ರಾಜ್ಯದಲ್ಲಿ ೩೦ ಜಿಲ್ಲೆಗಳೂ, ೧೭೬ ತಾಲ್ಲೂಕುಗಳೂ ಇವೆ. ಅವುಗಳಲ್ಲಿ ೧೯ ಗಡಿ ಜಿಲ್ಲೆಗಳಾದರೆ, ೫೨ ಗಡಿ ತಾಲ್ಲೂಕುಗಳು. ಈ ಎಲ್ಲ ತಾಲ್ಲೂಕುಗಳಲ್ಲಿ ಹತ್ತು-ಹಲವು ಸಮಸ್ಯೆಗಳಿವೆ. ಮುಖ್ಯವಾಗಿ ಗಡಿ ಕನ್ನಡಿಗರ ಬದುಕಿಗೆ ತೀರಾ ಅಗತ್ಯವಿರುವ ಮೂಲಸೌಕರ್ಯಗಳ ಕೊರತೆಯಿದೆ. ಉದಾಹರಣೆಗೆ, ನಂಜುಂಡಪ್ಪ ವರದಿಯ ಪ್ರಕಾರವೂ ರಾಜ್ಯದಲ್ಲೇ ಅತೀ ಹಿಂದುಳಿದ ತಾಲ್ಲೂಕೆಂದು ಗುರುತಿಸಲಾದ ಜೊಯಿಡಾ ಎಂಬ ಗಡಿ ತಾಲ್ಲೂಕು ಕುಡಿಯುವ ನೀರು, ಪ್ರಾಥಮಿಕ ಶಿಕ್ಷಣ, ರಸ್ತೆ, ಕಾಲುಸಂಕ, ಸ್ವಂತ ನೆಲ, ಮುಂತಾದ ಜೀವನಕ್ಕೆ ತೀರಾ ಅಗತ್ಯವಿರುವ ಸೌಲಭ್ಯಗಳಿಂದ ವಂಚಿತರಾಗಿರುವ ನಿದರ್ಶನಗಳು ಕಣ್ಣಿಗೆ ರಾಚುತ್ತವೆ.

೨೦೦೯ರ ಜನವರಿ ೧೬ ಮತ್ತು ೧೭ರಂದು ಇದೇ ಜೊಯಿಡಾದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ರಾಜ್ಯಮಟ್ಟದ ಗಡಿ ತಾಲ್ಲೂಕುಗಳ ಸಮಾವೇಶ ನಡೆಸಿದಾಗ, ನಡೆದ ವಿಸ್ತೃತ ಚರ್ಚೆಯ ಹಿನ್ನೆಲೆಯಲ್ಲಿ **'ಗಡಿ ಕನ್ನಡಿಗರು – ಜೊಯಿಡಾ ವರದಿ'** ಎಂಬ ವರದಿಯೊಂದನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಒಪ್ಪಿಸಲಾಗಿದೆ. ಅದರ ಪ್ರಕಾರ ಒಂದು ನೂರು ಕೋಟಿ ರೂಪಾಯಿಗಳ ಪ್ರತ್ಯೇಕ ವಿಶೇಷ ಅಭಿವೃದ್ಧಿ ಯೋಜನೆಯನ್ನು ಜೊಯಿಡಾ ತಾಲ್ಲೂಕಿಗಾಗಿಯೇ ಘೋಷಿಸಿ, ಕಾರ್ಯಗತಗೊಳಿಸುವಂತೆ ವಿನಂತಿಸಲಾಗಿದೆ.

ಇನ್ನುಳಿದ ಗಡಿ ತಾಲ್ಲೂಕುಗಳ ನೋವು–ನಷ್ಟಗಳ ಪಟ್ಟಿ ಕೂಡ ಸಾಕಷ್ಟು ದೊಡ್ಡದಿದೆ. ಸಮಸ್ಯೆಗಳು ತಾಲ್ಲೂಕಿನಿಂದ ತಾಲ್ಲೂಕಿಗೆ ಬೇರೆ ಬೇರೆಯಾಗಿವೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ಸಲ್ಲಿಸಲಾಗಿರುವ ಗಡಿ ವರದಿಗಳಲ್ಲಿ ಬಾಕಿ ಉಳಿದಿರುವ ಶಿಫಾರಸುಗಳನ್ನು ಗಮನಿಸಿ, ಎಲ್ಲ ಗಡಿ ತಾಲ್ಲೂಕುಗಳಿಗೆ ಅಗತ್ಯಾನುಸಾರ ಪ್ರತ್ಯೇಕ ಅಭಿವೃದ್ಧಿ ಯೋಜನೆಯನ್ನು ಘೋಷಿಸಬೇಕಾಗಿದೆ.

### ಶಿಫಾರಸುಗಳು

**೧. ರಾಜ್ಯದ ೫೨ ಗಡಿ ತಾಲ್ಲೂಕುಗಳ ಅವಶ್ಯಕತೆಗಳನ್ನು ಆದ್ಯತೆಯೊಂದಿಗೆ ಕಾಲಮಿತಿಯಲ್ಲಿ**

ಈಡೇರಿಸಲು ಸರ್ಕಾರ ತನ್ನ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಘೋಷಿಸಿ, ಗಡಿ ತಾಲ್ಲೂಕುಗಳ ಜನರ ಬಹುಕಾಲದ ಬವಣೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು.

೨. ಗಡಿ ತಾಲ್ಲೂಕುಗಳ ರಸ್ತೆಗಳ ಅಭಿವೃದ್ಧಿಗೆ ಪ್ರತ್ಯೇಕ ಕಾರ್ಯಪಡೆಯನ್ನು ನಿಯೋಜಿಸಬೇಕು.

೩. ಗಡಿ ತಾಲ್ಲೂಕುಗಳಲ್ಲಿನ ವೈದ್ಯಕೀಯ ಸೌಲಭ್ಯವನ್ನು ಅಭಿವೃದ್ಧಿಪಡಿಸಲು ವಿಶೇಷ ಯೋಜನೆಯನ್ನು ಮತ್ತು ಸರ್ಕಾರದ ವೈದ್ಯರು ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಗಡಿ ತಾಲ್ಲೂಕಿನಲ್ಲಿ ಮಾಡುವಂತೆ ಕಡ್ಡಾಯಗೊಳಿಸಬೇಕು.

೪. ಗಡಿ ತಾಲ್ಲೂಕಿನ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ವಿಶೇಷ ಕಾರ್ಯಪಡೆಯನ್ನು ರಚಿಸಬೇಕು. ಎಲ್ಲಾ ಶಾಲೆಗಳಲ್ಲಿನ ಮೂಲಭೂತ ಸೌಲಭ್ಯಗಳಲ್ಲದೆ, ಶಿಕ್ಷಣ ಸಾಮಗ್ರಿಯನ್ನು ಒದಗಿಸಲು ಕಾಲಮಿತಿ ಯೋಜನೆಗಳನ್ನು ರೂಪಿಸಬೇಕು.

೫. ಗಡಿ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಬಸ್‌ಪಾಸ್‌ಗಳನ್ನು ಸಕಾಲಕ್ಕೆ ಒದಗಿಸಬೇಕು. ಈ ಬಸ್‌ಪಾಸ್‌ಗಳನ್ನು ರಾಜ್ಯಸರ್ಕಾರದ ಎಲ್ಲಾ ರೀತಿಯ ಬಸ್‌ಗಳಲ್ಲಿಯೂ ಬಳಸಲಾಗುವಂತೆ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕು. ಕೆಲವೊಮ್ಮೆ ಈ ವಿದ್ಯಾರ್ಥಿಗಳು ಅಂತರ್ ರಾಜ್ಯಗಳಲ್ಲಿ ಓಡಾಡುವ ಬಸ್‌ಗಳಲ್ಲಿ ಓಡಾಡಿ ತಮ್ಮ ಊರುಗಳನ್ನು ತಲುಪಬೇಕಾದ ಅನಿವಾರ್ಯವಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಬಸ್‌ಪಾಸ್ ಬಳಸಲು ರೂಪಿಸಿರುವ ಕಾಯಿದೆಗಳಲ್ಲಿ ಬದಲಾವಣೆಗಳನ್ನು ತರಬೇಕು.

೬. ಗಡಿ ತಾಲ್ಲೂಕುಗಳಲ್ಲಿನ ರೈತ ಬಂಧುಗಳಿಗೆ ತಮ್ಮ ಉತ್ಪಾದನೆಗಳನ್ನು ರಾಜ್ಯದಲ್ಲಿಯೇ ಮಾರುವಂತಾಗಲು ವಿಶೇಷ ಮಾರುಕಟ್ಟೆಗಳನ್ನು ಹಾಗೂ ಗಡಿ ಕನ್ನಡಿಗರಿಗೆ ವಿಶೇಷ ಬೆಂಬಲಬೆಲೆಯನ್ನು ಸಹ ಸರ್ಕಾರವು ರೂಪಿಸಬೇಕು. ಈ ಮೂಲಕ ಅವರು ಮತ್ತೊಂದು ರಾಜ್ಯಕ್ಕೆ ವ್ಯಾಪಾರದ ಕಾರಣಕ್ಕಾಗಿ ಹೋಗುವುದನ್ನು, ಆ ಮೂಲಕ ಕನ್ನಡದಿಂದ ದೂರವಾಗುವುದನ್ನು ತಪ್ಪಿಸಲು ಸರ್ಕಾರವೇ ಮುಂದಾಗಬೇಕು.

೭. ಗಡಿ ತಾಲ್ಲೂಕುಗಳಲ್ಲಿನ ಕೃಷಿ ಕಾರ್ಮಿಕರು ಮತ್ತು ಇನ್ನಿತರ ಕೂಲಿ ಕಾರ್ಮಿಕರಿಗೆ ಕನಿಷ್ಠ ವೇತನವು ಸರಿಯಾಗಿ ತಲುಪುವಂತೆ ಹಾಗೂ ಅವರು ಕನ್ನಡ ನೆಲದಲ್ಲಿಯೇ ಉಳಿಯುವಂತಾಗಲು ವಿಶೇಷ ಯೋಜನೆಗಳನ್ನು ರೂಪಿಸಬೇಕು. ಈ ಕೂಲಿಕಾರ್ಮಿಕರು ಇತರ ರಾಜ್ಯಗಳಿಗೆ ಅಥವಾ ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲು ವಿಶೇಷ ಯೋಜನೆ ಅತ್ಯಗತ್ಯವಾಗಿದೆ.

# ೭.೩
# ಸಾಂಸ್ಕೃತಿಕ ಕರ್ನಾಟಕದ ಪರಿಕಲ್ಪನೆಗೆ ಒತ್ತು

**ಹೊ**ರ ನಾಡಿನ ಗಡಿಭಾಗಗಳಲ್ಲಿರುವ ಕನ್ನಡಿಗರು ಭಾವನಾತ್ಮಕವಾಗಿ ಕರ್ನಾಟಕ ದೊಂದಿಗೇ ಇರುವುದರಿಂದ ಅವರ ಪ್ರೀತಿ, ಅಭಿಮಾನ ಮತ್ತು ನಂಬಿಕೆಗಳನ್ನು ಗೌರವಿಸಿ ಪ್ರೋತ್ಸಾಹಿಸಬೇಕಾದುದು ಕರ್ನಾಟಕ ಸರ್ಕಾರದ ಕರ್ತವ್ಯವಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ತನ್ನ ಕಕ್ಷೆಯಲ್ಲಿರುವ ಅಕಾಡೆಮಿಗಳಿಗೆ, ಪ್ರಾಧಿಕಾರಗಳಿಗೆ ಹೊರನಾಡ ಗಡಿಕನ್ನಡಿಗರಲ್ಲಿ ಇರುವ ಪ್ರತಿಭಾವಂತರನ್ನು ಪರಿಗಣಿಸುತ್ತಿಲ್ಲ ಎಂಬ ನೋವು ಅವರಲ್ಲಿ ಇರುವುದನ್ನು ಪ್ರಾಧಿಕಾರವು ಕಂಡುಕೊಂಡಿದೆ. ಆಡಳಿತಾತ್ಮಕ ಕರ್ನಾಟಕ ಮತ್ತು ಸಾಂಸ್ಕೃತಿಕ ಕರ್ನಾಟಕ ಎಂಬ ದೃಷ್ಟಿಕೋನದಿಂದ ಯೋಚಿಸಿದಾಗ, ಹೊರನಾಡಿನ ಕನ್ನಡಿಗರು ಸಾಂಸ್ಕೃತಿಕ ಕರ್ನಾಟಕದ ಪ್ರಜೆಗಳಾಗಿ ಕಾಣಸಿಗುತ್ತಾರೆ. ಆದ್ದರಿಂದ ಅಲ್ಲಿಯ ಪ್ರತಿಭಾವಂತರನ್ನು ಸೂಕ್ತವಾದ ಸಾಂಸ್ಕೃತಿಕ ವೇದಿಕೆಗಳಿಗೆ ಬಳಸಿಕೊಳ್ಳಬೇಕೆಂಬುದು ಅವರ ಮನವಿಯಾಗಿದೆ. ರಾಷ್ಟ್ರಕವಿ ಗೋವಿಂದ ಪೈ ಕೇರಳ ರಾಜ್ಯಕ್ಕೆ ಸೇರಿದವರಾಗಿದ್ದರೂ, ಅವರನ್ನು ಸರ್ಕಾರವು ಕನ್ನಡದ ರಾಷ್ಟ್ರಕವಿಗಳ ಮಾಲಿಕೆಯಲ್ಲಿ ಸೇರಿಸಿಕೊಂಡದ್ದು ಎಷ್ಟು ಸಹಜವೋ ಅಷ್ಟೇ ಸಹಜವಾಗಿ ಗಡಿ ರಾಜ್ಯಗಳ ಮತ್ತು ಹೊರನಾಡಿನ ಪ್ರತಿಭಾವಂತ ಕನ್ನಡಿಗರನ್ನೂ ನಮ್ಮವರನ್ನಾಗಿ ಭಾವಿಸುವಂತಾಗಬೇಕು ಎಂಬ ಮನವಿ ಹೊರ ರಾಜ್ಯಗಳ ಕನ್ನಡಿಗರದ್ದಾಗಿದೆ.

### ಶಿಫಾರಸುಗಳು

**೧) ಗಡಿನಾಡುಗಳಲ್ಲಿರುವ ಕನ್ನಡಿಗರೆಲ್ಲ ಸಾಂಸ್ಕೃತಿಕ ಕರ್ನಾಟಕಕ್ಕೆ ಸೇರಿದ ಪ್ರಜೆಗಳು ಎಂಬ ನಿಲುವು ತಾಳುವ ಮೂಲಕ ಕರ್ನಾಟಕ ಸರ್ಕಾರವು ಮುಂಬರುವ ವರ್ಷಗಳಲ್ಲಿ ಅಕಾಡೆಮಿಗಳ ಮತ್ತು ಇನ್ನುಳಿದ ಸ್ವಾಯತ್ತ ಸಂಸ್ಥೆಗಳಿಗೆ ನಾಮನಿರ್ದೇಶನ ಮಾಡುವ ಸಂದರ್ಭದಲ್ಲಿ ಹೊರನಾಡುಗಳ ಕನ್ನಡಿಗರನ್ನೂ ಗಣನೆಗೆ ತೆಗೆದುಕೊಳ್ಳುವ ನಿಯಮ ಮಾಡಬೇಕು.**

ಆ) ಗಡಿ ಭಾಗಗಳಲ್ಲಿ ಇರುವ ಐದು ರಾಜ್ಯಗಳಲ್ಲಿ ಸಾಂಸ್ಕೃತಿಕ ಸಂಘಟನೆಗಳು ಮತ್ತು ಶಿಕ್ಷಣ ಸಂಸ್ಥೆಗಳು, – ಸಾಂಸ್ಕೃತಿಕ ಕರ್ನಾಟಕದ ಪರಿಕಲ್ಪನೆಯೊಂದಿಗೆ – ಇನ್ನಷ್ಟು ಕ್ರಿಯಾಶೀಲ ವಾಗಿದ್ದು, ನಿರಂತರ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ಸರಕಾರವು ವಿಶೇಷ ಆರ್ಥಿಕ ನೆರವನ್ನು ನೀಡುವ ನಿಯಮ ರೂಪಿಸಬೇಕು.

❍

# ೮
# ಹೊರನಾಡು-ದೇಶಗಳಲ್ಲಿರುವ ಕನ್ನಡಿಗರಿಗೆ ಕನ್ನಡ ಕಲಿಕಾ ಕೇಂದ್ರ ಹಾಗೂ ಅಲ್ಲಿಯ ಕನ್ನಡ ಸಂಘಟನೆಗಳ ಕಾರ್ಯಕ್ರಮಗಳಿಗೆ ಅನುದಾನ

**'ಕ**ನ್ನಡ ಜಗತ್ತು' ಎಂಬುದು ದಿನದಿಂದ ದಿನಕ್ಕೆ ದೊಡ್ಡದಾಗುತ್ತಲೇ ಇದೆ. ಕಲಿತ ಕನ್ನಡಿಗರು ವಿದೇಶಗಳಲ್ಲಿ ನೆಲೆಸುವ ಸಂಖ್ಯೆಯೂ ಹೆಚ್ಚಾಗುತ್ತಾ ಇದೆ. ಹೀಗೇ ಹೊರ ದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಅಲ್ಲಲ್ಲಿ ಕನ್ನಡ ಸಂಘಗಳನ್ನೂ ಆರಂಭಿಸಿ ಆಗಾಗ ಸೇರುತ್ತಿದ್ದಾರೆ. ಕನ್ನಡದ ಕೆಲಸವನ್ನು ತಮ್ಮ ಕೈಲಾಗುವಷ್ಟು ಮಾಡುತ್ತಾ ಇದ್ದಾರೆ. ಹೊರನಾಡ ಕನ್ನಡಿಗರನ್ನು ನಿರಂತರವಾಗಿ ಕನ್ನಡದ ವಾತಾವರಣದಲ್ಲಿ ಇರಿಸುವುದಕ್ಕೆ ಅನೇಕ ಕೆಲಸಗಳು/ಕಾರ್ಯಕ್ರಮಗಳು ಆಗಬೇಕಿದೆ.

ಹೀಗೆ ಹೊರ ದೇಶದಲ್ಲಿ ನೆಲೆಸಿರುವ ಕನ್ನಡಿಗರಿಗೆ ತಮ್ಮ ಮುಂದಿನ ತಲೆಮಾರಿಗೂ ಕನ್ನಡವನ್ನು ಕಲಿಸಬೇಕೆಂಬ ಅದಮ್ಯ ಆಸೆ ಇದೆ. ಇದಕ್ಕಾಗಿ ಅವರು ಸಣ್ಣ ಪುಟ್ಟ ಕನ್ನಡ ಕಲಿಕಾ ಕೇಂದ್ರಗಳನ್ನು ನಡೆಸುತ್ತಾ ಇರುವರಾದರೂ ಪೂರ್ಣ ಪ್ರಮಾಣದ ಕನ್ನಡವನ್ನು ಕಲಿಸಲು ಅನುಕೂಲಗಳಿಲ್ಲ. ಅಲ್ಲಿ ಆರಂಭಿಕ ಹಂತದ ಕನ್ನಡವನ್ನು ಕಲಿಸುವ ಯತ್ನ ಮಾತ್ರ ಆಗುತ್ತಿದೆ. ಈ ಕೆಲಸಕ್ಕೆ ಶಾಶ್ವತತೆ ಹಾಗೂ ನಿರಂತರತೆಯನ್ನು ಒದಗಿಸುವ ಕೆಲಸವನ್ನು ಕರ್ನಾಟಕ ಸರ್ಕಾರವು ಮಾಡಬೇಕಿದೆ.

### ಶಿಫಾರಸುಗಳು

**೧. ಹೊರನಾಡು–ಹೊರದೇಶಗಳಲ್ಲಿರುವ ಕನ್ನಡ ಸಂಘಗಳು ನಿರಂತರವಾಗಿ ಕನ್ನಡ ಚಟುವಟಿಕೆಗಳನ್ನು (ಕನ್ನಡ ಚಲನಚಿತ್ರೋತ್ಸವ, ರಂಗೋತ್ಸವ, ಕಾವ್ಯ ಸಂಜೆ, ಇತ್ಯಾದಿಗಳು) ನಡೆಸಲು ಅನುವಾಗುವಂತೆ ಆಯಾ ಸಂಘಟನೆಗಳ ಇತಿಹಾಸ ಮತ್ತು ಈವರೆಗಿನ**

ಚಟುವಟಿಕೆಗಳನ್ನು ಆಧಾರವಾಗಿ ಇರಿಸಿಕೊಂಡು ಕರ್ನಾಟಕ ಸರ್ಕಾರವು ವಾರ್ಷಿಕ ಅನುದಾನವನ್ನು ಬಿಡುಗಡೆ ಮಾಡಬೇಕು.

೨. ಹೀಗೆ ಕರ್ನಾಟಕ ಸರ್ಕಾರದಿಂದ ಅನುದಾನ ಪಡೆದ ಸಂಸ್ಥೆಗಳು ನಡೆಸುವ ಚಟುವಟಿಕೆಗಳನ್ನು ರೂಪಿಸಲು ಹಾಗೂ ಪರಾಮರ್ಶಿಸಲು ವಿಶೇಷ ಸಮಿತಿಯನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನೊಳಗೊಂಡಂತೆ ರೂಪಿಸಬೇಕು.

೩. ಹೀಗೆ ನಡೆಯುವ ಚಟುವಟಿಕೆಗಳಲ್ಲಿ ಕೇವಲ ಕರ್ನಾಟಕದ ಕಲಾವಿದರನ್ನು ವಿದೇಶಗಳಿಗೆ ಕಳಿಸುವುದಷ್ಟೇ ಅಲ್ಲದೆ ಅಲ್ಲಿನ ಕನ್ನಡಿಗರಲ್ಲಿ ಇರುವ ಕಲೆಯನ್ನು ಗುರುತಿಸುವ ಜವಾಬ್ದಾರಿಯೂ ಹಾಗೂ ಅಲ್ಲಿಯ ಕಲಾವಿದರನ್ನು ಭಾರತಕ್ಕೆ/ಕರ್ನಾಟಕಕ್ಕೆ ಕರೆಸುವಂತೆಯೂ ನಿಯಮಾವಳಿಯನ್ನು ರೂಪಿಸಬೇಕು.

೪. ಹೊರದೇಶಗಳಲ್ಲಿ ಕನ್ನಡದ ಕೆಲಸ ಮಾಡುತ್ತಾ ಇರುವವರನ್ನು ರಾಜ್ಯೋತ್ಸವ ಪ್ರಶಸ್ತಿ, ಇನ್ನಿತರ ಸರ್ಕಾರದ ಪ್ರಶಸ್ತಿಗಳಿಗೆ ಗುರುತಿಸುವ ಮೂಲಕ ಗೌರವಿಸುವಂತಾಗಬೇಕು. ಇದಕ್ಕಾಗಿ ಈ ಪ್ರಶಸ್ತಿಗಳಲ್ಲಿ ಹೊರದೇಶದ ಕನ್ನಡಿಗರಿಗಾಗಿ ಎಂದೇ ಪ್ರತ್ಯೇಕ ವಿಭಾಗವನ್ನು ಆರಂಭಿಸಬೇಕು. ಪ್ರತೀ ವರ್ಷ ಕನಿಷ್ಠ ಮೂವರು ಹೊರದೇಶದ ಕನ್ನಡಿಗರನ್ನು ಗೌರವಿಸುವ ಮೂಲಕ ಇನ್ನಿತರ ಕನ್ನಡಿಗರನ್ನು ಕನ್ನಡ ಜಗತ್ತಿನಲ್ಲಿ ಉಳಿಯುವಂತೆ ಪ್ರೇರೇಪಿಸಬೇಕು.

೫. ಹೊರದೇಶಗಳಲ್ಲಿರುವ ಕನ್ನಡ ಸಂಘಟನೆಗಳನ್ನೂ ಒಳಗೊಳ್ಳುವಂತೆ ಆಯಾ ದೇಶಗಳಲ್ಲಿ ಕನ್ನಡ ಭವನವೊಂದನ್ನು ಕಟ್ಟಬೇಕು. ಈ ಕನ್ನಡ ಭವನ, ಕನ್ನಡ ಸಂಸ್ಕೃತಿ ಕೇಂದ್ರವಾಗುವಂತೆ ನಿಯಮ ರೂಪಿಸಬೇಕು. ಇಲ್ಲಿನ ಸಭಾಭವನವು ಬಹುಮುಖೀ ಚಟುವಟಿಕೆಗೆ ಯೋಗ್ಯವಾಗಿರುವಂತೆ ರೂಪಿತವಾಗಬೇಕು. ಇಲ್ಲಿಯೇ ರಂಗೋತ್ಸವ, ಚಲನಚಿತ್ರೋತ್ಸವ, ಸಂಗೀತೋತ್ಸವ ಹಾಗೂ ಜನಪದೋತ್ಸವಗಳು ಆಗುವಂತೆ, ಜಾಗತಿಕವಾಗಿ ಒಂದೇ ಮಾದರಿಯ ಕನ್ನಡ ಭವನಗಳನ್ನು ವಾಸ್ತುಶಿಲ್ಪಿಗಳಿಂದ ವಿಶೇಷ ಮಾದರಿ ಪಡೆದು ಸಿದ್ಧಪಡಿಸಬೇಕು.

- ಈ ಭವನದಲ್ಲಿ ಕರ್ನಾಟಕದಿಂದ ಹೋಗುವ ಅತಿಥಿಗಳನ್ನು ಉಳಿಸುವ ವ್ಯವಸ್ಥೆಗೂ ಅನುಕೂಲವಿರಬೇಕು.
- ಇದೇ ಭವನದಲ್ಲಿ ಕನ್ನಡ ಕಲಿಸುವ ತರಗತಿಗಳನ್ನು ಆರಂಭಿಸಲು ಅನುವಾಗುವಂತಹ ಕೊಠಡಿಗಳೂ ಇರಬೇಕು.
- ಈ ಭವನದಲ್ಲಿ ಕನ್ನಡದ ಪುಸ್ತಕಗಳು ಹಾಗೂ ಕನ್ನಡದ ಧ್ವನಿಸುರುಳಿಗಳು, ಕನ್ನಡ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳನ್ನು ಮಾರುವ ಮಳಿಗೆಯೂ ಇರಬೇಕು.

೬. ಕನ್ನಡವನ್ನು ಪ್ರಾಥಮಿಕ ಹಂತದಲ್ಲಿ ಕಲಿತ ವಿದ್ಯಾರ್ಥಿಗಳು ತಮ್ಮ ಕನ್ನಡ ಕಲಿಕೆಯನ್ನು ಮುಂದುವರೆಸಲು ಅನುಕೂಲ ಒದಗಿಸುವುದಕ್ಕಾಗಿ ಸಹ ಅವಕಾಶಗಳನ್ನು ಒದಗಿಸಬೇಕು. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅದಾಗಲೇ ರೂಪಿತವಾಗಿರುವ 'ಕಾವ', 'ಜಾಣ', 'ರತ್ನ' ಮಾದರಿಯ ಪರೀಕ್ಷೆಗಳನ್ನು ನಡೆಸುವುದು.

೭. ಹೊರದೇಶದಲ್ಲಿರುವ ಕನ್ನಡಿಗರನ್ನು ಕನ್ನಡ ಜಗತ್ತಿನಲ್ಲಿ ನಿರಂತರವಾಗಿ ಇಡುವುದು ಕರ್ನಾಟಕ ಸರ್ಕಾರವು ಕನ್ನಡವನ್ನು ಉಳಿಸುವಲ್ಲಿ ಮಾಡಬೇಕಾದ ಕರ್ತವ್ಯ ಆಗಿರುವುದರಿಂದ ಈ ಎಲ್ಲ ಕೆಲಸಗಳನ್ನು ನಿರ್ವಹಿಸಲು, ವಿಶೇಷ ವಿದೇಶಿ ಕನ್ನಡಿಗರ ಮಂಡಳಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ರೂಪಿಸಬೇಕು.

❍

## ೯.೧
# ಆದಿಕವಿ ಪಂಪನ ಹೆಸರಿನಲ್ಲಿ ಪ್ರಾಚೀನ ಕನ್ನಡ ಸಂಶೋಧನ ಕೇಂದ್ರ

**ಕ**ನ್ನಡಕ್ಕೆ ಅಭಿಜಾತ (ಶಾಸ್ತ್ರೀಯ) ಭಾಷೆಯ ಸ್ಥಾನಮಾನ ನೀಡಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ಆದೇಶ ಹೊರಡಿಸಿ ಮೂರು ವರ್ಷಗಳಾದವು. ಆದೇಶ ಹೊರಡಿಸಿದ ಮಾತ್ರಕ್ಕೆ ತನ್ನ ಕರ್ತವ್ಯ ಮುಗಿಯಿತು ಎಂಬಂತೆ ಕೇಂದ್ರ ಸರ್ಕಾರ ತಣ್ಣಗಾಗಿದೆ. ಅಭಿಜಾತ ಭಾಷೆಗಳ ಸಂಶೋಧನೆ, ಅಧ್ಯಯನ ಮತ್ತು ಅಭಿವೃದ್ಧಿಗಾಗಿ ಕೇಂದ್ರದ ಮಾನವಸಂಪನ್ಮೂಲ ಇಲಾಖೆ ವಿಶೇಷ ಆರ್ಥಿಕ ನೆರವು ನೀಡಬೇಕೆಂಬ ನಿಯಮವಿದೆ. ಈ ಸೌಲಭ್ಯವನ್ನು ಪಡೆಯುವುದಕ್ಕಾಗಿ ಕರ್ನಾಟಕ ಸರ್ಕಾರವು ಈಗಾಗಲೇ ಒಂದು ಕ್ರಿಯಾಯೋಜನೆಯನ್ನು ಕೇಂದ್ರಕ್ಕೆ ಕಳಿಸಿ, ವರ್ಷವೇ ಕಳೆದು ಹೋದರೂ ಯಾವ ಪ್ರತಿಸ್ಪಂದನ ಇಲ್ಲದಿರುವುದು ಶೋಚನೀಯ. ಆ ಸೌಲಭ್ಯವನ್ನು ಪಡೆಯುವು ದಕ್ಕಾಗಿ ಹೆಚ್ಚುವರಿಯಾಗಿ ಇನ್ನೇನು ಮಾಡಬೇಕು ಎಂಬಿತ್ಯಾದಿ ವಿವರಗಳನ್ನು ಪಡೆದುಕೊಂಡು ನ್ಯಾಯಯುತವಾಗಿ ಬರಬೇಕಾದ ಕೇಂದ್ರದ ಧನಸಹಾಯವನ್ನು ಪಡೆಯುವುದು ಒಂದು ದಾರಿ. ರಾಜ್ಯ ಸರ್ಕಾರವು ತನ್ನದೇ ಆದ ಸಂಪನ್ಮೂಲವನ್ನು ತೊಡಗಿಸಿ, ಅಭಿಜಾತ ಭಾಷೆಯಾದ ಕನ್ನಡದ ಪ್ರಾಚೀನತೆ, ವೈಶಿಷ್ಟ್ಯತೆ ಮತ್ತು ಭವಿಷ್ಯದ ಬಗ್ಗೆ ಪ್ರತ್ಯೇಕ ಕ್ರಿಯಾಯೋಜನೆಯೊಂದನ್ನು ರೂಪಿಸಿ, ಕಾರ್ಯಪ್ರವೃತ್ತವಾಗುವುದು ಇನ್ನೊಂದು ದಾರಿ.

ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಬಹಳಷ್ಟು ಸಂಶೋಧನ ಕಾರ್ಯ ಆಗಿದ್ದರೂ, ಆಗಬೇಕಾದದ್ದು ಬಹಳ ಇದೆ. ಉದಾಹರಣೆಗೆ, ಆದಿಕವಿ ಪಂಪನ ಹೆಸರಿನಲ್ಲಿ ಕಳೆದ ಅನೇಕ ವರ್ಷಗಳಿಂದ ಕನ್ನಡದ ಬಹುಮುಖ್ಯ ಲೇಖಕರೊಬ್ಬರಿಗೆ 'ಪಂಪ ಪ್ರಶಸ್ತಿ' ನೀಡುತ್ತ ಬಂದಿರುವುದು ತಿಳಿದ ವಿಚಾರ. ಅದರಲ್ಲಿ ಯಾವ ಬದಲಾವಣೆಯನ್ನೂ ಮಾಡದೇ ಪಂಪನ ಹೆಸರಿನಲ್ಲಿ ಇನ್ನೊಂದು ಸಂಶೋಧನಾ ಕೇಂದ್ರವನ್ನು ಸರ್ಕಾರ ತೆರೆಯಬೇಕಾದುದಿದೆ. ಕನ್ನಡ ನೆಲ ಮತ್ತು ಭಾಷೆಗಳ

ಪ್ರಾಚೀನತೆಯ ಬಗ್ಗೆ, ಸಮೃದ್ಧಿಯ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಸುವುದಕ್ಕಾಗಿ ಈ ಕೇಂದ್ರದ ಬಳಕೆಯಾಗಬೇಕು. ಹೊಸ ತಲೆಮಾರಿನ ಸಂಶೋಧನಕುತೂಹಲಿಗಳಿಗೆ ಅದೊಂದು ಪ್ರಧಾನ ವೇದಿಕೆಯಾಗಬೇಕು. ಈಗಾಗಲೇ ಸಂಶೋಧನ ಕಾರ್ಯದಲ್ಲಿ ಇಡಿಯಾಗಿ ತೊಡಗಿಸಿಕೊಂಡವರಿಗೂ ಕೂಡ ಈ ಕೇಂದ್ರವು ಅಧಿಕೃತ ವೇದಿಕೆಯಾಗಬೇಕು.

## ಶಿಫಾರಸು

**ಕನ್ನಡಕ್ಕೆ ಅಭಿಜಾತ ಭಾಷೆಯ ಸ್ಥಾನಮಾನ ಸಿಕ್ಕಿರುವುದರಿಂದ ಹಳಗನ್ನಡ ಮತ್ತು ಅದರ ಪೂರ್ವಕಾಲದ ನಾಡುನುಡಿಯ ಕುರಿತಾಗಿ ಸಂಶೋಧನಾತ್ಮಕ ವಿಶೇಷ ಅಧ್ಯಯನಕ್ಕೆ ಕರ್ನಾಟಕ ಸರ್ಕಾರವು ಆದಿಕವಿ ಪಂಪನ ಹೆಸರಲ್ಲಿ ಒಂದು ಸಂಶೋಧನಾ ಕೇಂದ್ರವನ್ನು ತೆರೆಯಬೇಕು.**

○

# ೯.೨
# ದೆಹಲಿಗೆ ಜಂಟಿ ನಿಯೋಗ

ಕನ್ನಡ ನಾಡು – ನುಡಿಗೆ ಸಂಬಂಧಿಸಿದ ಅನೇಕ ಬೇಡಿಕೆಗಳು ನೆನೆಗುದಿಗೆ ಬಿದ್ದಿವೆ. ಉದಾಹರಣೆಗೆ:

ಅ) ಕನ್ನಡಕ್ಕೆ ಅಭಿಜಾತ (ಶಾಸ್ತ್ರೀಯ) ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಸಿಗಬೇಕಾದ ಸೌಲಭ್ಯಗಳ ಕುರಿತು ಸಲ್ಲಿಸಿದ ಕ್ರಿಯಾ ಯೋಜನೆಗೆ ಮಂಜೂರಿ

ಆ) ಶಿಕ್ಷಣ ಮಾಧ್ಯಮ ಕುರಿತಾಗಿ **'ರಾಷ್ಟ್ರೀಯ ಶಿಕ್ಷಣ ನೀತಿ'** ರೂಪಿಸುವುದು,

ಇ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಗಾಗಿ ಸಂವಿಧಾನದ ೩೭೧ನೇ ಕಲಂಗೆ ತಿದ್ದುಪಡಿ ತರುವುದು.

ಈ) ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ಬೇಡಿಕೆ ಮತ್ತು ಕೇಂದ್ರ ಸರ್ಕಾರವು **'ರಾಷ್ಟ್ರೀಯ ಉದ್ಯೋಗ ನೀತಿ'** ರೂಪಿಸಲು ಹಕ್ಕೊತ್ತಾಯ.

ಉ) ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರು ಶಾಖೆಗೆ ಸ್ವಾಯತ್ತತೆ ನೀಡುವುದು. ಈ ಮುಂತಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ತನ್ನ ಮಿತಿಯಲ್ಲಿ ಪ್ರಯತ್ನ ನಡೆಸುತ್ತಲೇ ಬಂದಿದೆ. ಆದರೆ ಪ್ರಯೋಜನ ಆದಂತಿಲ್ಲ. ಇದಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು ಮುಂತಾದ ಸ್ವಾಯತ್ತ ಸಂಸ್ಥೆಗಳು ಹಾಗೂ ಕನ್ನಡಪರ ಹೋರಾಟಗಳ ಪ್ರಮುಖ ನಾಯಕರೊಂದಿಗೆ ರಾಜಕೀಯ ಪಕ್ಷಗಳ ಮುಖಂಡರ ಜಂಟಿ ನಿಯೋಗವನ್ನು ಮುಖ್ಯಮಂತ್ರಿಗಳು ಕೇಂದ್ರಕ್ಕೆ ಕರೆದೊಯ್ದು ಹೆಚ್ಚಿನ ಒತ್ತಡ ಹೇರಬೇಕಾದ ಅಗತ್ಯವಿದೆ. ಬೇರೆ ಬೇರೆ ಕ್ಷೇತ್ರಗಳ ವಿದ್ವಾಂಸರು ಮತ್ತು ಹೋರಾಟಗಾರರು ಸಮಿತಿಯಲ್ಲಿ ಇರುವುದರಿಂದ ಇಂತಹ ಒಂದು ಪ್ರಯತ್ನಕ್ಕೆ ವಿಶೇಷ ಮನ್ನಣೆ ಸಿಗಬಹುದಾದ ಸಾಧ್ಯತೆ ಇದೆ. ತಜ್ಞರ ಈ ನಿಯೋಗವು ಕೇಂದ್ರದಲ್ಲಿ ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳನ್ನು ಸಾಕಷ್ಟು ಪ್ರಭಾವಿಸುವ ಸಾಧ್ಯತೆ ಇದ್ದೇ ಇದೆ.

## ಶಿಫಾರಸು

ಬಹುಕಾಲದಿಂದ ಕೇಂದ್ರ ಸರ್ಕಾರದ ಮುಂದೆ ನೆನೆಗುದಿಗೆ ಬಿದ್ದಿರುವ ನಾಡು-ನುಡಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಸಾಧ್ಯವಾದಷ್ಟು ಬೇಗ ಈಡೇರಿಸಿಕೊಳ್ಳುವು ದಕ್ಕಾಗಿ ಕರ್ನಾಟಕ ಸರ್ಕಾರವು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವಪಕ್ಷಗಳ ಮುಖಂಡರೊಂದಿಗೆ, ಕನ್ನಡಪರ ಸ್ವಾಯತ್ತ ಸಂಸ್ಥೆಗಳ, ವಿದ್ವಾಂಸರ ಹಾಗೂ ಹೋರಾಟಗಾರವಲಯದ ತಜ್ಞರನ್ನೊಳಗೊಂಡ ಜಂಟಿ ಸಮಿತಿಯೊಂದನ್ನು ರಚಿಸಿ, ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರು ಮತ್ತು ಕಾರ್ಯದರ್ಶಿಗಳನ್ನು ಖುದ್ದಾಗಿ ಕಂಡು ಆಗ್ರಹಿಸಬೇಕು.

○

# ೧೦
# ಸಮಾರೋಪ

ಈ ವರದಿಯಲ್ಲಿ ೧೦ ಅಧ್ಯಾಯಗಳ ಅಡಿಯಲ್ಲಿ ಒಟ್ಟು ೨೭ ಶಿಫಾರಸುಗಳಿವೆ. ಇವುಗಳ ಆಚೆಯೂ ಒಂದಷ್ಟು ಸಮಸ್ಯೆಗಳಿವೆ ಅನ್ನುವುದು ನಮಗೆ ಗೊತ್ತಿದೆ. ಕನ್ನಡದ ಹಿರಿಯ ಚಿಂತಕರು ಸರ್ಕಾರಕ್ಕೆ ಹಿಂದೆ ಕೊಟ್ಟ ವರದಿಗಳಲ್ಲಿ ಅವುಗಳ ಪ್ರಸ್ತಾಪ ಬಂದಿದೆ. ಸರ್ಕಾರವು ಆ ಎಲ್ಲ ವರದಿಗಳಲ್ಲಿ ಪ್ರಸ್ತಾಪವಾಗಿ ಇಂದಿನವರೆಗೆ ಕಾರ್ಯಗತವಾಗದೇ ಇರುವ ಪ್ರಮುಖ ಅಂಶಗಳ ಬಗ್ಗೆ ತುರ್ತು ಗಮನ ಹರಿಸುತ್ತದೆ ಎಂಬ ನಂಬಿಕೆ ನಮ್ಮದಾಗಿದೆ.

ಕರ್ನಾಟಕದಲ್ಲಿ ಈಗಾಗಲೇ ಗುರುತಿಸಲಾದ ೫೨ ಗಡಿ ತಾಲ್ಲೂಕುಗಳ ಅಭಿವೃದ್ಧಿಗಾಗಿಯೇ, **ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ** ಅಸ್ತಿತ್ವಕ್ಕೆ ಬಂದಿರುವುದು ಹೆಮ್ಮೆಯ ವಿಚಾರವಾಗಿದೆ. ಆ ತಾಲ್ಲೂಕುಗಳಂತೂ ಸಮಸ್ಯೆಗಳ ಆಗರವೇ ಆಗಿವೆ ಎಂದರೆ ತಪ್ಪಾಗಲಾರದು. ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕೈಬಲಪಡಿಸಿ ಗಡಿಭಾಗದ ಕನ್ನಡಿಗರ ಬಹುಕಾಲದ ಬೇಡಿಕೆಗಳನ್ನು ಕರ್ನಾಟಕ ಘನ ಸರ್ಕಾರ ಸಾಧ್ಯವಾದಷ್ಟೂ ಬೇಗ ಈಡೇರಿಸಿ, ಅಲ್ಲಿಯ ಜನರು ಉದ್ಯೋಗ ಮತ್ತಿತರ ಕಾರಣಗಳಿಗಾಗಿ ನೆರೆ ರಾಜ್ಯಗಳಿಗೆ ವಲಸೆ ಹೋಗದಂತೆ ನೋಡಿಕೊಳ್ಳಬೇಕೆಂದು ವಿನಂತಿಸುತ್ತೇವೆ.

ನಮ್ಮ ಮುಂದಿನ ತಲೆಮಾರು ಬಹುಪಾಲು ಗಣಕಲೋಕದಲ್ಲಿಯೇ ಕಲಿಕೆ ಮತ್ತು ರಂಜನೆ ಪಡೆಯುತ್ತಾ ಇರುವುದರಿಂದ ಗಣಕ ಕನ್ನಡದ ಏಕೀಕರಣವು ಆದ್ಯತೆಯ ವಿಷಯವಾಗಿದೆ. ಈ ಬಗ್ಗೆ ಅದಾಗಲೇ ಇರುವ ವರದಿಗಳಲ್ಲಿ ಬಿಟ್ಟು ಹೋಗಿರುವ ಅಂಶಗಳನ್ನೇ ನಮ್ಮ ಅಧ್ಯಾಯದಲ್ಲಿ ಪ್ರಸ್ತಾಪಿಸಿದೆ. ಈ ನಿಟ್ಟಿನಲ್ಲಿ ಆಲೋಚಿಸಿ, ಗಣಕ ಕನ್ನಡ ಏಕೀಕರಣಕ್ಕೆ ಸರ್ಕಾರವು ಮುಂದಾಗಬೇಕಾದ್ದು ತುರ್ತು ಅಗತ್ಯವಾಗಿದೆ.

ಮೂರು ವರ್ಷಗಳ ನಮ್ಮ ಕಾಲಾವಧಿಯಲ್ಲಿ ಅನೇಕ ಕನ್ನಡಪರ ಯೋಜನೆಗಳನ್ನು ಹಾಕಿಕೊಂಡು ಅವುಗಳ ಅನುಷ್ಠಾನಕ್ಕೆ ಮುಂದಾದೆವು. ಅನುಷ್ಠಾನದ ಅವಧಿಯಲ್ಲಿ ನಮ್ಮ ಗಮನಕ್ಕೆ ಬಂದ ಜ್ವಲಂತ ಸಮಸ್ಯೆಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ. ಈ ಅಂಶಗಳು ನಾಡಿನ ಒಳ ಹೊರಗೆ ಇರುವ ಎಲ್ಲ ಕನ್ನಡಿಗರ ಅಂತರಾಳದ ಅಹವಾಲುಗಳೇ ಆಗಿವೆ.

ಕನ್ನಡಿಗರ ಬಹುಕಾಲದ ಬಹಳಷ್ಟು ಚಟುವಟಿಕೆಗಳು, ಪರಿಶೀಲನೆಯ ಹಂತದಲ್ಲೇ ಇವೆ. ಅವೆಲ್ಲ ಕಾರ್ಯಗತವಾದಾಗಲೇ ಕರ್ನಾಟಕ ಸರ್ಕಾರವು ಕನ್ನಡಿಗರ ಸರಕಾರವೆಂಬ ಹೆಮ್ಮೆಗೆ ಪಾತ್ರವಾಗಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಅರ್ಪಿಸುತ್ತಿರುವ ಈ ವರದಿ ಸಮೃದ್ಧ ಕರ್ನಾಟಕದ ಸಮಸ್ತ ಕನ್ನಡಿಗರ ಆಶೋತ್ತರಗಳನ್ನು ಸರಕಾರದ ಮೂಲಕ ಈಡೇರಿಸುವುದಕ್ಕೆ ಪ್ರೇರಣೆಯಾಗಲಿ ಎಂದು ಹಾರೈಸುತ್ತೇವೆ.

ಉದ್ಯೋಗದಲ್ಲಿ ಕನ್ನಡಿಗರಿಗೆ ಆದ್ಯತೆ ಸಿಗುವುದಕ್ಕೆ, ಶಿಕ್ಷಣದಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ಸಿಗುವುದಕ್ಕೆ ಕಾನೂನಿನಡಿಯಲ್ಲಿ ಹಲವು ತೊಡಕುಗಳಿವೆಯಾದರೂ ಸಂವಿಧಾನದಲ್ಲಿರುವ ಪ್ರಾದೇಶಿಕ ಭಾಷಾ ರಕ್ಷಣೆ ಎಂಬ ಕಲಮಿನಡಿಯಲ್ಲಿ ಹೋರಾಡಿಯಾದರೂ ಕನ್ನಡಿಗರ ಅಗತ್ಯಗಳನ್ನು ಪೂರೈಸಬೇಕಿದೆ. ಇಲ್ಲವಾದಲ್ಲಿ ಕನ್ನಡಿಗನು ಕನ್ನಡ ನಾಡೊಳಗೇ ಹತಾಶನಾಗುವಂತಾಗುತ್ತದೆ ಎಂಬುದನ್ನು ಮತ್ತೊಮ್ಮೆ ನೆನಪಿಸ ಬಯಸುತ್ತೇನೆ.

ೕ